ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ · ಬಸವ ಕಲ್ಯಾಣ ತಾಲ್ಲೂಕುನಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಕೆರೆಗಳನ್ನು ಮಾಡತಕ್ಕಂಥಾದ್ದಕ್ಕೆ acquire ಮಾಡಿಕೊಂಡಂಥ ಜಾಗಗಳ ದುಡ್ಡು ಇನ್ನೂ ರೈತರಿಗೆ ಮುಟ್ಟಿಲ್ಲ ಆ ದುಡ್ಡನ್ನು ಯಾವಾಗ ಮುಟ್ಟಿಸುತ್ತಾರೆ ಎನ್ನುವುದನ್ನು ಕ್ಲಿಯರ್ ಆಗಿ ಉಪ ಮುಖ್ಯಮಂತ್ರಿಗಳು ಹೇಳಬೇಕು ಅದೇ ರೀತಿ, ಬಸವ ಕಲ್ಯಾಣದಲ್ಲಿ ಮನ್ನಳ್ಳಿ ಟ್ಯಾಂಕ್ sanctionಆಗಿ ಸುಮಾರು 2 ವರ್ಷಗಳಾಗಿದೆ ಅದರ ಕಾಮಗಾರಿ ಇನ್ನೂ ಕೂಡ ಪ್ರಾರಂಭವಾಗಿಲ್ಲ ಅದನ್ನು ಯಾವಾಗ ಪ್ರಾರಂಭ ಮಾಡುತ್ತಾರೆ ಎನ್ನುವುದನ್ನೂ ಹೇಳಬೇಕು

ಶ್ರೀ ಬಿ ಎಸ್ ಯಡಿಯೂರಪ್ಪ ನಿಮ್ಮ ಪ್ರಶ್ನೆಗೆ ನಾನು ಸವಿಸ್ತಾರವಾದ ಉತ್ತರವನ್ನು ಕೊಟ್ಟಿದ್ದೇನೆ ತಾವು ಉಪ ಪ್ರಶ್ನೆಯನ್ನು ಕೇಳಿರುವಂಥಾದ್ದಕ್ಕೆ ನಾನು ಹೇಳುವುದೇನೆಂದರೆ, ನಾನು ಈಗಾಗಲೇ ಹೇಳಿದಂತೆ, ಆದ್ಯತೆ ಮೇಲೆ ಹಣವನ್ನು ಬಿಡುಗಡೆ ಮಾಡಿ ಕೆಲಸವನ್ನು ಪ್ರಾರಂಭ ಮಾಡುತ್ತೇನೆ ಹೋದ ವರ್ಷದಿಂದ ಈ ವರ್ಷಕ್ಕೆ ಸ್ಪಿಲ್‌ಓವರ್ ವರ್ಕ್ಸ್ ಇದೆ ಅದಕ್ಕೆ ಹಣವನ್ನು ಕೊಟ್ಟುತ್ತಿದ್ದೇವೆ ಅದರ ಕಡೆ ನಾನು ಗಮನವನ್ನು ಕೊಡುತ್ತೇನೆ

ಇ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಬಸವರಾಜ್ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖಾ ಸಚಿವರು) ಮಾನ್ಯ ಉಪಾಧ್ಯಕ್ಷರೆ, ದಿನಾಂಕ 23–07–2007 ರಂದು ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 11ನೇ ಪಟ್ಟಿಯಲ್ಲಿರುವ 93 ಪ್ರಶ್ನೆಗಳ ಪೈಕಿ 70 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ

ಉಪಾಧ್ಯಕ್ಷರು ಮಂಡಿಸಲಾಯಿತು

(ಅನುಬಂಧ–1)

2) ಅಧ್ಯಕ್ಷರೆ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ) ವಿಷಯ . ಪೌರ ಕಾರ್ಮಿಕರು ಮುಷ್ಕರ ನಡೆಸುತ್ತಿರುವ ಬಗ್ಗೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ · ಮಾನ್ಯ ಉಪಾಧ್ಯಕ್ಷರೆ, ಪೌರ ಕಾರ್ಮಿಕರ ಮುಷ್ಕರದ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ನಾವು ಅಧ್ಯಕ್ಷರ ಹತ್ತಿರ ಅನುಮತಿಯನ್ನು ಕೇಳಿದ್ದೆವು ಪೌರ ಕಾರ್ಮಿಕರು ಒಂದು ವಾರದಿಂದ ಮುಷ್ಕರ ಮಾಡುತ್ತಿದ್ದಾರೆ ಎಲ್ಲ ನಗರಗಳೂ ಗಬ್ಬೆದ್ದು ಹೋಗಿವೆ ಅಲ್ಲಿ ಕಸ ಗುಡಿಸುವವರಿಲ್ಲ, ನೀರು ಬಿಡುವವರಿಲ್ಲ ಆ ವಿಷಯವನ್ನು ಚರ್ಚೆ ಮಾಡಲಿಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಬೇಕು ಅವರು ಮುಷ್ಕರ ಹೂಡಿ ಒಂದು ವಾರವಾಯಿತು ಒಂದು ವಾರದಿಂದ ಆ ಸಮಸ್ಯೆ ಪರಿಹಾರವಾಗಿಲ್ಲ ನಮ್ಮ ನಗರಗಳೆಲ್ಲ ವಾಸನೆ ಹೊಡೆಯುತ್ತಿವೆ ಮಂತ್ರಿಗಳು, ಸರ್ಕಾರ ಏನು ಮಾಡುತ್ತಿದೆ ಎಂದು ಗೊತ್ತಾಗುತ್ತಿಲ್ಲ ಸಮಸ್ಯೆ ಪರಿಹಾರ ಮಾಡಿಲ್ಲ ಅವರು ಮುಷ್ಕರವನ್ನು ಮುಂದುವರೆಸಿದ್ದಾರೆ ಸರ್ಕಾರ ಅವರನ್ನು ಮಾತುಕತೆಗೆ ಕರೆಯುತ್ತಿಲ್ಲ ಸರ್ಕಾರ

ನಿದ್ದೆ ಮಾಡುತ್ತಿದೆಯೇ? ಲಕ್ಷಾಂತರ ಜನ ಪೌರ ಕಾರ್ಮಿಕರು ಮುಷ್ಕರ ಹೂಡಿದ್ದಾರೆ ಕುಡಿಯುವುದಕ್ಕೆ ನೀರಿಲ್ಲ ಕಸ ಹೊಡೆಯುತ್ತಿಲ್ಲ ಅಲ್ಲಿ ಜನರು ಏನಾಗಬೇಕು ಸರ್ಕಾರ ಏನು ಮಾಡುತ್ತಿದೆ? ಸರ್ಕಾರ ಇದೆಯೇ? ಸರ್ಕಾರ ಇವತ್ತು ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು

ಶ್ರೀ ವಾಟಾಳ್ ನಾಗರಾಜ್ ಇದರ ಬಗ್ಗೆ ತಾವು ಇವತ್ತು ತೀರ್ಮಾನ ತೆಗೆದುಕೊಳ್ಳಬೇಕು ಪೌರ ಕಾರ್ಮಿಕರ ಸಮಸ್ಯೆಯನ್ನು ಬಗೆಹರಿಸಬೇಕು

(ಗೊಂದಲ)

ಶ್ರೀ ಜಿ ವಿ ಶ್ರೀರಾಮರೆಡ್ಡಿ ಸಮಸ್ಯೆ ಪರಿಹಾರವಾಗಬೇಕು ನಗರಗಳಲ್ಲಿ ಒಂದು ಕೆಲಸವೂ ಆಗುತ್ತಿಲ್ಲ

(ಗೊಂದಲ)

ಉಪಾಧ್ಯಕ್ಷರು : ನೀವು ಹೇಳಿದಿರಲ್ಲ ಅವರು ಏನು ಹೇಳುತ್ತಾರೆಂದು ಕೇಳಿ

(ಗೊಂದಲ)

ಉಪಾಧ್ಯಕ್ಷರು ಅವರಿಗೆ ಮಾತನಾಡಲು ಬಿಡುತ್ತೀರೋ, ಇಲ್ಲವೋ? ನೀವು ಹೇಳಿರುವುದು ಅರ್ಥವಾಗಿದೆ ಅವರು ಏನು ಹೇಳುತ್ತಾರೋ ಕೇಳೋಣ ಈ ರೀತಿ ಮಾಡಿದರೆ ಹೇಗೆ? ಅವರ ಉತ್ತರ ಬೇಡವೇ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ . ಸಮಸ್ಯೆಯನ್ನು ಬಗೆಹರಿಸುತ್ತೇವೆ ಎಂದು ಸ್ಪಷ್ಟವಾಗಿ ನೇರವಾಗಿ ಮಂತ್ರಿಗಳು ಹೇಳಬೇಕು

(ಗೊಂದಲ)

ಶ್ರೀ ಜಿ ವಿ ಶ್ರೀರಾಮರೆಡ್ಡಿ ಅವರು ಒಂದು ವಾರದಿಂದ ಮುಷ್ಕರ ಮಾಡುತ್ತಿದ್ದಾರೆ ಸರ್ಕಾರ ಮಾಡುತ್ತಿದೆಯೇ? ಇವರು ಕಣ್ಣು ಮುಚ್ಚಿಕೊಂಡಿದ್ದಾರೆಯೇ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ ಪೌರ ಕಾರ್ಮಿಕರ ಬಗ್ಗೆ ಇವರಿಗೆ ಕರುಣೆ ಇಲ್ಲ ಬಹಳ ಬೇಜವಾಬ್ದಾರಿ ಇದು ಇದು ಒಳ್ಳೆಯದಲ್ಲ

(ಗೊಂದಲ)

ಶ್ರೀ ಬಿ ಆರ್ ಪಾಟೀಲ್ : ಇವತ್ತು ನಗರಗಳಲ್ಲಿ ಕಸ ಹೊಡೆಯುವವರಿಲ್ಲ, ಲೈಟ್ ಹಚ್ಚುವವರಿಲ್ಲ ಇಡೀ ನಗರಸಭೆಗಳೆಲ್ಲ ಗಬ್ಬೆದ್ದು ನಾರುತ್ತಿವೆ ಜನರ ಆರೋಗ್ಯದ ಮೇಲೆ ಬಹಳ ಕೆಟ್ಟ ಪರಿಣಾಮ ಬೀರುತ್ತಿದೆ ಇಡೀ ರಾಜ್ಯದಲ್ಲಿ ಇವತ್ತು ಪೌರ ಕಾರ್ಮಿಕರು ಬೀದಿಗೆ ಬಂದು ಹೋರಾಟ ಮಾಡುತ್ತಿದ್ದಾರೆ

ಉಪಾಧ್ಯಕ್ಷರು ಪಾಟೀಲರೇ, opposition leader ಏನೋ ಹೇಳಬೇಕೆಂದು ನಿಂತಿದ್ದಾರೆ ಒಂದು ನಿಮಿಷ ಇರಿ

ಶ್ರೀ ಧರಸಿಂಗ್ ಇವತ್ತು ರಾಜ್ಯದಲ್ಲಿ ಎಲ್ಲ ಕಡೆಗಳಲ್ಲಿ ಪೌರ ಕಾರ್ಮಿಕರ ಮುಷ್ಕರ ಬಹಳಷ್ಟು ಪರಿಣಾಮಕಾರಿಯಾಗಿ ನಡೆಯುತ್ತಿದೆ ನಿನ್ನೆ ನಾನು ಗುಲ್ಬರ್ಗದಲ್ಲಿದ್ದಾಗ, ನೀರು ಬಿಡತಕ್ಕಂಥ ಕಾರ್ಮಿಕರು ಬಂದು ಪ್ರತಿಭಟನೆ ಮಾಡಿದ್ದಾರೆ ಪೌರಾಡಳಿತ ಸಚಿವರು ಸ್ವಲ್ಪ ತಿಳಿದುಕೊಳ್ಳಬೇಕು ಇದಕ್ಕೆ top priority ಕೊಡಬೇಕು ಮೊನ್ನೆ ರಾಜ್ಯದಲ್ಲಿ Government employee ಯವರ ಒಂದು ದೊಡ್ಡ ಸಮಾವೇಶವಾಯಿತು ದಿನಗೂಲಿ ನೌಕರರನ್ನು ಖಾಯಂ ಮಾಡತಕ್ಕಂಥ ಮಾತನ್ನು ಮುಖ್ಯಮಂತ್ರಿಗಳು ಹೇಳಿದರು, ಉಪ ಮುಖ್ಯಮಂತ್ರಿಗಳೂ ಹೇಳಿದರು ಖಾಯಂ ಮಾಡಲು ಎಲ್ಲಿ existing vacancy ಗಳಿವೆ ಎನ್ನುವುದನ್ನು ನೀವು ತಿಳಿದುಕೊಂಡು, ಇದನ್ನು ಮಾಡಲೇಬೇಕು ಎನ್ನುವ ರೀತಿಯಲ್ಲಿ ಮುಖ್ಯಮಂತ್ರಿಗಳ ಬಳಿಗೆ file ಹಿಡಿದುಕೊಂಡು ಹೋಗಬೇಕು You are the in-charge Minister ಇವತ್ತು ಎಲ್ಲ ಕಡೆಗಳಲ್ಲಿ ಪೌರ ಕಾರ್ಮಿಕರು ಇಷ್ಟು ಪ್ರತಿಭಟನೆ ಮಾಡುತ್ತಿದ್ದಾರೆ ಸರ್ಕಾರ ಸುಮ್ಮನಿರುವುದನ್ನು ನೋಡಿ ಸರ್ಕಾರ ಇದೆಯೋ, ಇಲ್ಲವೋ ಎನ್ನುವ ಮಾತುಗಳು ಬರುತ್ತಿವೆ ಈ ಬಗ್ಗೆ ಶ್ರೀರಾಮರೆಡ್ಡಿಯವರು, ವಾಟಾಳ್ ನಾಗರಾಜ್‌ರವರು, ಜಯಪ್ರಕಾಶ್ ಹೆಗ್ಡೆಯವರು, ರಾಜೇಂದ್ರನ್‌ರವರು ಎಲ್ಲರೂ ಮಾತನಾಡಿದರು ರಮೇಶ್ ಕುಮಾರ್‌ರವರು, ದೇಶಪಾಂಡೆ ಯವರು, ನಾವೆಲ್ಲರೂ ಮಾತನಾಡಿದ್ದೇವೆ ಅದಕ್ಕೆ ತಾವು ಇವತ್ತು ಉತ್ತರ ಕೊಡಲೇಬೇಕು ಒಂದು ತಿಂಗಳ ಒಳಗಾಗಿ ಆಗಬೇಕೆಂದು ನಾವು ಹೇಳಿದ್ದೇವೆ ನೀವು ಮಾಡದಿದ್ದರೆ ನಾವು ಪ್ರತಿಭಟನೆಯನ್ನು ಮುಂದುವರೆಸುತ್ತೇವೆ ಎಂದು ಪೌರ ಕಾರ್ಮಿಕರ ಮುಖಂಡರು ಮೈಸೂರಿನಲ್ಲಿ ಹೇಳಿದ್ದಾರೆ ಇವತ್ತು ಎಲ್ಲ ಕಡೆಗಳಲ್ಲಿ ಪ್ರತಿಭಟನೆ ನಡೆಯುತ್ತಿದೆ You have got the important portfolio ಇವತ್ತು ನಿಮಗೆ ಸಮಸ್ಯೆ ಅರ್ಥವಾಗುತ್ತಿಲ್ಲ 27 ವರ್ಷಗಳ ಹಿಂದೆ ನಾನೂ ಕೂಡ ಈ ಖಾತೆಯನ್ನು ನಿರ್ವಹಿಸಿದ್ದೇನೆ ಆಂಜನೇಯರವರನ್ನು ಕೇಳಿ ಆಗ ನಾನು ದಾವಣಗೆರೆಗೆ ಹೋಗಿ ಅಲ್ಲಿ ಏನೊಂದು ನಿರ್ಧಾರ ಮಾಡಿದ್ದೆವು ಎನ್ನುವುದನ್ನು ಕೇಳಿ ಎಲ್ಲರನ್ನೂ ಮಾತುಕತೆಗೆ ಕರೆಸಬೇಕು ಏನೇ ಸಮಸ್ಯೆಯಿರಲಿ ಯಡಿಯೂರಪ್ಪನವರು ಬರಲಿ, ಮುಖ್ಯಮಂತ್ರಿಗಳು ಬರಲಿ Chief Secretary ಯವರು ಏನು ಮಾಡುತ್ತಿದ್ದಾರೆ? ಅವರು ಮಲಗಿದ್ದಾರೆಯೇ? ಸದನಕ್ಕೆ ಮುಖ್ಯಕಾರ್ಯದರ್ಶಿಗಳು ಯಾವಾಗಲೂ ಬರಬೇಕು ಸದನದಲ್ಲಿ ಪ್ರಸ್ತಾಪ ಮಾಡತಕ್ಕಂಥಾದ್ದನ್ನು ಅವರು ನೋಡಬೇಕು ನಿಮ್ಮ ಪ್ರಧಾನ ಕಾರ್ಯದರ್ಶಿಗಳು ಯಾರು? ಯಾರು ಬಂದಿದ್ದಾರೆ? ನಿಮ್ಮ ಡೈರೆಕ್ಟರ್ ಎಲ್ಲಿದ್ದಾರೆ? ನನಗೆ ಎಲ್ಲ ಗೊತ್ತು Nobody is here ನಾವು ಪ್ರಸ್ತಾಪ ಮಾಡುತ್ತಿರುವಂಥಾದ್ದಕ್ಕೆ ತಾವು

ನಿಖರವಾದ ಉತ್ತರವನ್ನು ಕೊಡಲೇಬೇಕು ನಿಖರವಾದ ಉತ್ತರವನ್ನು ಕೊಡದಿದ್ದರೆ ನಾವು ಇಲ್ಲಿ ಕೂರಲಿಕ್ಕೆ ಆಗುವುದಿಲ್ಲ

ಶ್ರೀ ವಾಟಾಳ್ ನಾಗರಾಜ್ ಸರ್ಕಾರ ಇದನ್ನು ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ಮಾಡಿಕೊಂಡರೆ ಆಗುವುದಿಲ್ಲ

ಶ್ರೀ ಆರ್ ವಿ ದೇಶಪಾಂಡೆ ಆ ದಿನ ಆ ಭಾಗದ ಮತ್ತು ಈ ಭಾಗದ ಎಲ್ಲ ಸದಸ್ಯರೂ ಸಮಸ್ಯೆಯನ್ನು ಬಗೆಹರಿಸಬೇಕೆಂದು ಒತ್ತಾಯ ಮಾಡಿದ್ದಾರೆ ಎಲ್ಲೆಲ್ಲಿ vacancy ಇವೆ, ಅವುಗಳನ್ನು immediate ತುಂಬಿ ಎಂದು ಹೇಳಿದ್ದೇವೆ 5th Pay commissionಅನ್ನು ತಾವು ಜಾರಿ ಮಾಡುತ್ತೇವೆ ಎಂದು ಹೇಳಿದಿರಿ ಎಲ್ಲೆಲ್ಲಿ post create ಮಾಡಬೇಕು, ಅದನ್ನು Deputy C Mರವರನ್ನು ಕೇಳಿ ಮಾಡಿ ಎಂದು ಹೇಳಿದೆವು ಕಳುಹಿಸಿ, ಮಾಡುತ್ತೇವೆ ಎಂದು ಹೇಳಿದರು ಇದು, ಇವತ್ತು, ನಾಳೆ ಅಥವಾ ಮತ್ತೊಂದು ದಿವಸ ಮಾಡುವ ಕೆಲಸವಲ್ಲ ಪೌರ ಕಾರ್ಮಿಕರು ಪ್ರತಿಯೊಂದು ಕ್ಷೇತ್ರಗಳಲ್ಲಿಯೂ ಬಂದು ನಮ್ಮನ್ನು ಭೇಟಿಯಾಗಿ ಮನವಿ ಕೊಟ್ಟಿದ್ದಾರೆ ಅವರದು genuine demands ಆಗಿವೆ ತಾವೂ ಮಾತು ಕೊಟ್ಟಿರಿ ತಮಗೂ ಅವರ ಬಗ್ಗೆ ಸಹಾನುಭೂತಿ ಇದೆ ಎನ್ನುವ ಮಾತನ್ನು ತಾವು ಹೇಳಿದಿರಿ ಹಾಗಾಗಿ ತಕ್ಷಣ ಒಂದು ಉತ್ತರ ಕೊಟ್ಟರೆ ಅವರು strike ವಾಪಸ್ಸು ತೆಗೆದುಕೊಳ್ಳುತ್ತಾರೆ ಇಡೀ ಸದನದ ಸದಸ್ಯರು ಬೆಂಬಲ ಕೊಡುತ್ತಾರೆ ಯಾರದೂ ಭಿನ್ನಾಭಿಪ್ರಾಯವಿಲ್ಲ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಸಚಿವರು ಪ್ರತಿಷ್ಠೆಯ ಪ್ರಶ್ನೆ ಮಾಡಿಕೊಳ್ಳಬಾರದು ಪೌರಕಾರ್ಮಿಕರು ಅವರ ಜೀವನ, ಅವರ ಭದ್ರತೆ, ಅವರು ಮಾಡುವ ಕೆಲಸವನ್ನು ನೋಡಿದರೆ, ಕರುಣೆಗಿಂತ ಹೆಚ್ಚಾಗಿ ಅವರು ಕೆಲಸ ಎಷ್ಟು ಮಾಡಿದ್ದಾರೆ? ಯಾವ ರೀತಿ ಕೆಲಸ ಮಾಡುತ್ತಿದ್ದಾರೆ? ಎಂಬುದನ್ನು ನೋಡಿಯಾದರೂ ಅವರಿಗೆ ಎಲ್ಲಾ ರೀತಿಯ ಸವಲತ್ತುಗಳನ್ನು ಕೊಡಬೇಕು ಹೆಚ್ಚಿನ ಅನುಕೂಲ ಮಾಡಿಕೊಡಬೇಕು ಅದ್ಯಾವುದನ್ನೂ ಗಮನಿಸದೇ, ಅವರು ಇಷ್ಟು ದಿವಸ ಸತ್ಯಾಗ್ರಹ ಮಾಡುತ್ತಿದ್ದರೆ ಸರ್ಕಾರ ಮೌನವಾಗಿ ಸತ್ತ ಹಾಗೆ ಕುಳಿತರೆ ಅದು ಒಳ್ಳೆಯ ಸೂಚನೆ ಅಲ್ಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಪೌರಕಾರ್ಮಿಕರ ಬಗ್ಗೆ ನಾನು ಮೊನ್ನೆ ಗುರುವಾರ ಪ್ರಶ್ನೆ ಕೇಳಿದ್ದೆ ಆಗ ಅದಕ್ಕೆ ಉತ್ತರ ಕೊಡುವ ಸಂದರ್ಭದಲ್ಲಿ ಬಹಳ ಸ್ಪಷ್ಟವಾಗಿ 'ಇವತ್ತು ಸಂಜೆಯೊಳಗೆ ನಾನು ಅವರ ಪದಾಧಿಕಾರಿಗಳ ಜೊತೆ ಚರ್ಚೆ ಮಾಡಿ ಸಮಸ್ಯೆ ಪರಿಹಾರ ಮಾಡಿಸುತ್ತೇನೆಂದು' ಸದನದಲ್ಲಿ ಉತ್ತರ ಕೊಟ್ಟು ಒಂದು ವಾರವಾಯಿತು ಇವತ್ತು ಪರಿಸ್ಥಿತಿ ಬಹಳ ಬಿಗಡಾಯಿಸಿದೆ ಮೊದಲ ಹಂತದಲ್ಲಿ ಅವರು ಕುಡಿಯುವ ನೀರನ್ನು ತಡೆಹಿಡಿಯುವುದಿಲ್ಲ ಬಿಡುತ್ತೇವೆ, ಬೇರೆ ಅಗತ್ಯ ಕೆಲಸಗಳನ್ನು ಮಾಡುತ್ತೇವೆಂದು ಹೇಳಿದರು ಇವರು ಯಾವಾಗ ಅವರ ಸಮಸ್ಯೆಯನ್ನು ಬಗೆಹರಿಸಲಿಲ್ಲವೋ,

ಈಗ ಅವರು ನೀರು ಬಿಡುವುದನ್ನು ಸಹ ನಿಲ್ಲಿಸಿಬಿಟ್ಟಿದ್ದಾರೆ ನೀರು ಕೂಡ ಬಿಡುತ್ತಿಲ್ಲ ಎಲ್ಲಾ ನಗರಗಳಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಎದ್ದಿದೆ ಇದಕ್ಕೆ ಜವಾಬ್ದಾರರು ಯಾರು? ಈ ಸರ್ಕಾರಕ್ಕೆ ಜವಾಬ್ದಾರಿ ಇಲ್ಲವೇ? ನನಗೆ ಮೊನ್ನೆಯ ದಿವಸ ಉತ್ತರ ಕೊಟ್ಟವರು ಏನು ಮಾಡುತ್ತಿದ್ದಾರೆ?

ಶ್ರೀ ಸಿ ಟಿ ರವಿ : ಮಾನ್ಯ ಉಪಾಧ್ಯಕ್ಷರೆ, ಚಳುವಳಿ ಪ್ರಾರಂಭವಾಗಿ ಇವತ್ತಿಗೆ 8 ದಿವಸಗಳಾದವು Alternative ವ್ಯವಸ್ಥೆ ಮಾಡಲಿಕ್ಕೆ ಜಿಲ್ಲಾಧಿಕಾರಿಗಳಿಗೆ ಜವಾಬ್ದಾರಿ, ಅಧಿಕಾರ ಕೊಟ್ಟಿದ್ದೇವೆಂದು ಸರ್ಕಾರ ಹೇಳಿಕೆ ಕೊಟ್ಟಿದೆ ನಾನು ನಮ್ಮ ಜಿಲ್ಲೆಯ ಜಿಲ್ಲಾಧಿಕಾರಿಯವರಿಗೆ ನಿನ್ನೆಯಿಂದ phone ಮಾಡುತ್ತಿದ್ದೇನೆ, phone switch off ಆಗಿದೆ ಅವರು ಮನೆಯಲ್ಲೂ ಇಲ್ಲ, office ನಲ್ಲೂ ಇಲ್ಲ ಕುಡಿಯುವ ನೀರಿಲ್ಲವೆಂದು ಜನರು ಬೀದಿಯಲ್ಲಿ ನಿಂತಿದ್ದಾರೆ ಅದಕ್ಕೆ ಏನು ವ್ಯವಸ್ಥೆ ಮಾಡುವುದು? ಯಾರದೋ ತಪ್ಪಿಗೆ ನಾವು ಆ ಜನರಿಗೆ ತಲೆ ಕೊಡಬೇಕು ಹೀಗೇನಾದರೂ ಇನ್ನೂ ಒಂದು ತಿಂಗಳು ಚಳುಚಳಿ ಮುಂದುವರೆದು, ಒಂದು ತಿಂಗಳು ಬಿಟ್ಟು ಚುನಾವಣೆ ಬಂದರೆ ನಾವು ನಾಮ ಹಾಕಿಕೊಳ್ಳಬೇಕಾಗುತ್ತದೆ ಹಾಗಾಗಿ ತಕ್ಷಣ ಕರೆದು ಸಮಸ್ಯೆ ಬಗೆಹರಿಸತಕ್ಕಂಥ ಕೆಲಸ ಮಾಡಬೇಕು ಜಿಲ್ಲಾಧಿಕಾರಿಗಳಿಗೆ ಜವಾಬ್ದಾರಿ ಕೊಟ್ಟಿದ್ದೇವೆಂದು ಹೇಳಿಕೆ ಕೊಟ್ಟರೆ ಸಾಲದು ಆ ಜಿಲ್ಲಾಧಿಕಾರಿ ಕೆಲಸ ಮಾಡಿಕೊಡುವ ಹಾಗೆ ನೋಡಿಕೊಳ್ಳಬೇಕಲ್ಲವೇ? ನಮ್ಮ ಜಿಲ್ಲೆಯ ಜಿಲ್ಲಾಧಿಕಾರಿಯವರ phone not reachable ಎಂದು ಬರುತ್ತಿದೆ ಕೇಳಿದರೆ ಅವರು ಮನೆಯಲ್ಲೂ ಇಲ್ಲ, office ನಲ್ಲೂ ಇಲ್ಲ ನಮಗೆ ಅವರನ್ನು ಹುಡುಕುವುದೇ ಕಷ್ಟವಾಗಿದೆ

ಶ್ರೀ ಡಿ ಮಂಜುನಾಥ್ ನಮ್ಮ ಮನೆ ಮುಂದೆ ಬಂದು ಸತ್ಯಾಗ್ರಹ ಮಾಡುತ್ತಿದ್ದಾರೆ ನಾವೆಲ್ಲ ಇಲ್ಲಿಯೇ ಇದ್ದೇವೆ ಅಲ್ಲಿ ಹೋಗಿ ಕುಳಿತುಕೊಂಡು ಸಿಕ್ಕಾಬಟ್ಟೆ ಕೂಗುತ್ತಿದ್ದಾರೆ ಈಗ ಸದನದಲ್ಲಿ ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಯಡಿಯೂರಪ್ಪನವರಿದ್ದಾರೆ ಅದಕ್ಕೆ ಏನಾದರೊಂದು ಇತಿಶ್ರೀ ಹಾಡಿಬಿಡಿ ಏನಾದರೂ ಮಾಡಿ ಅವರ ಮುಷ್ಕರ ನಿಲ್ಲುವ ಹಾಗೆ ಮಾಡಬೇಕು ಇಲ್ಲದೇ ಹೋದರೆ ನೀರು ನಿಲ್ಲಿಸಿದರೆ, ಕಸ ಗುಡಿಸದಿದ್ದರೆ ಇವತ್ತಿನ ಪರಿಸ್ಥಿತಿ ಏನಾಗಬಹುದು? ಅದೂ ಕೂಡ ನಮ್ಮ ಮನೆಯ ಮುಂದೆ ತೆಗೆದುಕೊಂಡು ಹೋಗಿ ಹಾಕುತ್ತಾರೆ ನಮ್ಮ ಮನೆ ಮುಂದೆ ಎಲ್ಲರೂ ಕುಳಿತುಬಿಟ್ಟಿದ್ದಾರೆ ಸಿಕ್ಕಾಬಟ್ಟೆ ನಮ್ಮನ್ನು ಟೀಕೆ ಮಾಡುತ್ತಾರೆ ಅದಕ್ಕೆ ಈಗ ದಯವಿಟ್ಟು ಒಂದು ಸ್ಪಷ್ಟವಾದ ಉತ್ತರವನ್ನು ಹೇಳಬೇಕು ಮಾನ್ಯ ಯಡಿಯೂರಪ್ಪನವರಿಗೆ ಮನವಿ ಮಾಡಿಕೊಳ್ಳುತ್ತಿದ್ದೇನೆ, ಇದಕ್ಕೇನಾದರೂ ಅತೀ ಶೀಘ್ರವಾಗಿ ತೀರ್ಮಾನ ತೆಗೆದುಕೊಳ್ಳಿ, ಇವತ್ತಿನ ದಿವಸ ಮುಷ್ಕರ ಮಾಡುತ್ತಿರುವವರು ಬಹಳಷ್ಟು ಎಲ್ಲ ಶಾಸಕರ ಮನೆ ಮುಂದೆ ಬಂದು ಕುಳಿತಿದ್ದಾರೆ ಇದನ್ನು ಹೇಗಾದರೂ ಮಾಡಿ ತಪ್ಪಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ

ಶ್ರೀ ಡಿ ಆರ್ ಪಾಟೀಲ್ ಮಾನ್ಯ ಉಪಾಧ್ಯಕ್ಷರೆ, ನಿನ್ನೆಯ ವರೆಗೆ ಕೇವಲ cleaning department ನವರು ಮಾತ್ರ strike ನಡೆಸುತ್ತಿದ್ದರು ನಿನ್ನೆಯಿಂದ ಕುಡಿಯುವ ನೀರನ್ನು ಸಹ ಬಂದ್ ಮಾಡಿದ್ದಾರೆ ಬೇರೆ ಯಾರೇ ಮುಷ್ಕರ ಮಾಡಿದರೂ ತಡೆದುಕೊಳ್ಳಬಹುದು ಆದರೆ, ಪೌರಕಾರ್ಮಿಕರು ಮುಷ್ಕರ ಮಾಡಿದರೆ, ಕುಡಿಯುವ ನೀರನ್ನು ಬಿಡುವವರು ಮುಷ್ಕರ ಮಾಡಿದರೆ ತಡೆದುಕೊಳ್ಳುವುದಕ್ಕಾಗುವುದಿಲ್ಲ ದಯವಿಟ್ಟು ಕೂಡಲೇ ಅವರನ್ನು ಕರೆದು ಅವರ ನ್ಯಾಯೋಜಿತ ಬೇಡಿಕೆಗಳನ್ನು ಈಡೇರಿಸಿ ನಾಳೆಯಿಂದ ಅವರು ಕೆಲಸಕ್ಕೆ ಹಾಜರಾಗುವ ಹಾಗೆ ಸರ್ಕಾರ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಹೆಚ್ ಆಂಜನೇಯ ಮಾನ್ಯ ಉಪಾಧ್ಯಕ್ಷರೆ, ಪೌರಕಾರ್ಮಿಕರು ಮುಷ್ಕರವನ್ನು ಮಾಡುತ್ತಿದ್ದಾರೆ ಈಗಿನ ವಿರೋಧ ಪಕ್ಷದ ನಾಯಕರಾದಂಥ ಶ್ರೀಮಾನ್ ಧರ್ಮಸಿಂಗ್‌ರವರು ಕೂಡ ಹಿಂದೆ ಪೌರಾಡಳಿತ ಮಂತ್ರಿಗಳಾಗಿದ್ದರು ಆ ಸಂದರ್ಭದಲ್ಲಿ ಪೌರಕಾರ್ಮಿಕರ ನೇಮಕಾತಿಗಳಾದವು ಐ ಪಿ ಡಿ ಸಾಲಪ್ಪ ನವರ ವರದಿಯನ್ನು ಅಂಗೀಕರಿಸಿದರು ಅಂದಿನಿಂದ ಇಂದಿನವರೆಗೂ ಕೂಡ ಐ ಪಿ ಡಿ ಸಾಲಪ್ಪನವರ ವರದಿಯನ್ನು ಒಪ್ಪಿಕೊಂಡಿರುವ ಈ ಸರ್ಕಾರ ಜನಸಂಖ್ಯೆಗನುಗುಣವಾಗಿ ಮುಂದೆ ಬಂದಂಥ ಯಾವ ಸರ್ಕಾರಗಳೂ ಕೂಡ ಮಾಡಲಿಲ್ಲ ಜನಸಂಖ್ಯೆಗನುಗುಣವಾಗಿ ನೇಮಕಾತಿಯಾಗಿಲ್ಲ ಇವತ್ತು ಪೌರಕಾರ್ಮಿಕರನ್ನು ಯಾವ ರೀತಿ ಮಾಡುತ್ತಿದ್ದಾರೆಂದರೆ, ಎಲ್ಲಾ ನಗರಸಭೆಗಳಲ್ಲಿ ಜೀತಗಾರಿಕೆ ಆಗುತ್ತಿದೆ ಅವರ ಮೇಲೆ ಒಂದು ರೀತಿಯ ದಬ್ಬಾಳಿಕೆ ನಡೆಯುತ್ತಿದೆ ಇವತ್ತು ಸ್ವಚ್ಛತೆ ಕೆಲಸವನ್ನು ಗುತ್ತಿಗೆ ಆಧಾರದ ಮೇಲೆ ಖಾಸಗಿ ವ್ಯಕ್ತಿಗಳು ಮಾಡುತ್ತಿದ್ದಾರೆ ಆ ನೌಕರರಿಗೆ ಯಾವುದೇ ರೀತಿಯ ಭದ್ರತೆ ಇಲ್ಲ ಇದೊಂದು ರೀತಿಯಲ್ಲಿ ಜೀತಗಾರಿಕೆಗೆ ಸರ್ಕಾರಗಳು ಉತ್ತೇಜನ ನೀಡಿದ ಹಾಗೆ ಇದೆ ಸ್ವಚ್ಛತೆ ಕೆಲಸವನ್ನು ಗುತ್ತಿಗೆ ಆಧಾರದ ಮೇಲೆ ಕೊಡುವುದನ್ನು ನಿಲ್ಲಿಸಬೇಕು ಎಷ್ಟು ಸಾವಿರ ಪೌರ ಕಾರ್ಮಿಕರ ಹುದ್ದೆಗಳು ಖಾಲಿ ಇವೆಯೋ ಅವೆಲ್ಲವನ್ನೂ ಭರ್ತಿ ಮಾಡಬೇಕು ಈಗ ಪೌರ ಕಾರ್ಮಿಕರ ಸಂಖ್ಯೆ ಕ್ಷೀಣಿಸಿದೆ ಪೌರ ಕಾರ್ಮಿಕರೇ ಇಲ್ಲ ಎಲ್ಲ ದಿನಗೂಲಿ ಕೆಲಸಗಾರರು ಈಗ ಪೌರಕಾರ್ಮಿಕರೆಂದರೆ ಎಲ್ಲ ಖಾಸಗಿ ವ್ಯಕ್ತಿಗಳ ಹತ್ತಿರ ಕೆಲಸ ಮಾಡುತ್ತಿರತಕ್ಕಂಥವರು ಎಲ್ಲಾ ನಗರಸಭೆಗಳಲ್ಲೂ ಕೂಡ ನಿವೃತಿ ಹೊಂದಿದ ನಂತರ ಪೌರ ಕಾರ್ಮಿಕರ ಮರು ನೇಮಕಾತಿ ಆಗುತ್ತಿಲ್ಲ ಇದರಿಂದ ಮಾನ್ಯ ಪೌರಾಡಳಿತ ಸಚಿವರಾಗಿರುವಂಥ ಶ್ರೀ ಆಲಂಗೂರು ಶ್ರೀನಿವಾಸ್‌ರವರು– ಇದೇನು ಬಹಳ ವರ್ಷಗಳ ಕಾಲ ಹರಿಜನರು, ಗಿರಿಜನರು, ಬಡವರು, ದುರ್ಬಲರು ಶೋಷಿತ ವರ್ಗದವರೇ ಕೆಲಸ ಮಾಡಿಕೊಂಡು ಬಂದಿರತಕ್ಕಂಥ ಈ ನೌಕರರೇನಿದ್ದಾರೆ, ಇವರ ಆರೋಗ್ಯವನ್ನು

KLK

ಉಪಾಧ್ಯಕ್ಷರು ಏನು ಮಾತನಾಡುತ್ತಿದ್ದೀರಿ? ಅವರು ಉತ್ತರ ಕೊಡಬೇಕೇ ಅಥವಾ ಬೇಡವೇ? ಸುಮ್ಮನೆ ಅದನ್ನು ಹೇಳಿಕೊಂಡು ಹೋಗುವುದರಲ್ಲಿ ಅರ್ಥ ಏನಿದೆ? ಅವರು ಹೌದು ಎನ್ನುತ್ತಾರೋ ಅಥವಾ ಇಲ್ಲ ಎಂದು ಹೇಳುತ್ತಾರೋ ಎನ್ನುವುದನ್ನು ಕೇಳೋಣ ಆ ಮೇಲೆ ಬೇಕಾದರೆ ಮಾತನಾಡಿ

ಶ್ರೀ ಹೆಚ್ ಆಂಜನೇಯ ಈಗ KCSR ಪ್ರಕಾರ ಸರ್ಕಾರಿ ನೌಕರರಿಗೆ ದೊರಕುವ ಎಲ್ಲಾ ಸವಲತ್ತುಗಳು ಕೂಡ ಪೌರ ಸೇವಾ ನೌಕರರಿಗೆ ದೊರಕಬೇಕು, ಪೌರಕಾರ್ಮಿಕರಿಗೆ ದೊರಕಬೇಕು ಅದು ನಮ್ಮ ಆಗ್ರಹವಾಗಿದೆ ದಯಮಾಡಿ ಸರ್ಕಾರ ಮುಷ್ಕರ ನಿರತ ನೌಕರರು ಮತ್ತು ಅವರ ಮುಖಂಡರನ್ನು ಕರೆದು ಸಮಸ್ಯೆ ಬಗೆಹರಿಸಬೇಕು, ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಬೇಕೆಂದು ಈ ಮೂಲಕ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಪೌರಾಡಳಿತ ಸಚಿವರಲ್ಲಿ ಕೇಳುವುದೇನೆಂದರೆ, ಹಣಕಾಸಿನ ಬಗ್ಗೆ ಹೇಳುತ್ತೇನೆ ಪೌರಕಾರ್ಮಿಕರಿಗೆ ಈಗಾಗಲೇ ತಾವು 12th Finance ನಲ್ಲಿ ಮತ್ತು second SFC ಯಲ್ಲಿ ಈಗಾಗಲೇ ನೌಕರಸ್ಥರಿಗೆ ಹಣ ಕೊಡುತ್ತಿದ್ದೀರಿ ಖಾಯಂ ಮಾಡಲಿಕ್ಕೆ ನಿಮಗೆ ಅಂಥ ತೊಂದರೆ ಏನು? ಇಲ್ಲಿ ಅಂಥ ಹೆಚ್ಚಿನ ಹಣಕಾಸಿನ ತೊಂದರೆ ಇಲ್ಲ ನಿಮಗೆ ಮನಸ್ಸಿಲ್ಲ, ರಾಜಕೀಯ ಇಚ್ಛಾಶಕ್ತಿ ಇಲ್ಲವೆಂದು ನನಗನ್ನಿಸುತ್ತದೆ Second Finance Commission recommendation ಪ್ರಕಾರ ಅವರಿಗೆ ಹಣ ಕೊಡುತ್ತಿದ್ದೀರಿ 12th Finance recommendation ಪ್ರಕಾರ ಅವರಿಗೆ ಹಣ ಕೊಡುತ್ತಿದ್ದೀರಿ ಖಾಯಂ ಮಾಡಲಿಕ್ಕೆ ಸ್ವಲ್ಪ ಹೆಚ್ಚಿನ ಬೇಕಾಗಬಹುದು ಅದನ್ನು ಮಾಡಬಾರದೇಕೆ? ಇದೇನೋ ಬಹಳಷ್ಟು ತೊಂದರೆ ಇಲ್ಲ ಅದಕ್ಕೆ ಬೇಗನೇ ಇವರನ್ನು ಖಾಯಂಗೊಳಿಸಿ ಈ ಮುಷ್ಕರವನ್ನು ಅವರು ಹಿಂತೆಗೆದುಕೊಳ್ಳುವ ಹಾಗೆ ಮಾಡಬೇಕು ಅದಕ್ಕೆ ಸ್ಪಷ್ಟವಾದ ಉತ್ತರ ಕೊಡಬೇಕು ಇದಕ್ಕೆ ಹಣಕಾಸಿನ ತೊಂದರೆ ಇದ್ದರೆ ಮಾನ್ಯ ಉಪಮುಖ್ಯಮಂತ್ರಿಗಳು ಹೇಳಲಿ ಹೇಳಬೇಕಾಗುತ್ತದೆ ಹೇಳದೇ ಅವರು ಸುಮ್ಮನೆ ಮೌನವಹಿಸಿದರೆ ಏನು ಮಾಡುವುದಕ್ಕಾಗುತ್ತದೆ?

(ಗೊಂದಲ)

ಶ್ರೀ ಸಿ ಟಿ ರವಿ ಮಾನ್ಯ ಉಪಾಧ್ಯಕ್ಷರೆ, ರಾಜಕೀಯ ಇಚ್ಛಾಶಕ್ತಿ ಇದ್ದವರು ಅಭಿಪ್ರಾಯ ವ್ಯಕ್ತಪಡಿಸಿರುವುದು ಅಷ್ಟರಲ್ಲಿಯೇ ಇದೆ ನೀವೆಲ್ಲ ಮಾಡಿದ್ದರೆ ಈ problems ಬರುತ್ತಲೇ ಇರಲಿಲ್ಲ

(ಗೊಂದಲ)

ಶ್ರೀ ಕೆ ಶ್ರೀನಿವಾಸ ಗೌಡ ಪಟ್ಟಣಗಳಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ ಇವತ್ತು strike ಏನು ಮಾಡುತ್ತಿದ್ದಾರೆ ಅವರು panel boardಗಳನ್ನು ಸಹ ಬಿಚ್ಚಿಕೊಂಡು ಹೋಗಿದ್ದಾರೆ ಇದುವರೆಗೂ ಕೂಡ ಗುಂಪಾಗಿ ನಮ್ಮ ಮನೆ ಹತ್ತಿರ ಜನ ಬಂದು ನೀರಿಲ್ಲ, ನೀರಿಲ್ಲ ಎಂದು ಹೇಳುತ್ತಿದ್ದಾರೆ ಅದು ಅವರಿಗೂ ಗೊತ್ತಿದೆ ಯಾವ ರೈಲು ಬಿಟ್ಟರೋ ಗೊತ್ತಿಲ್ಲ ಕೋಲಾರ ರೈಲ್ವೆ ಲೈನ್ ಅನ್ನು board-gauge ಮಾಡದೇ ಇನ್ನೂ meter gauge ನಲ್ಲಿಯೇ ಇದೆ ಇನ್ನು board-gauge ಮಾಡಿಲ್ಲ, ಅಲ್ಲಿ ಇವರು ರೈಲು ಬಿಟ್ಟರು ಈ ದಿನಗೂಲಿ ನೌಕರರಿಗೆ ಸಂಬಂಧಪಟ್ಟ ಕಡತವನ್ನು finance ಗೆ ಕಳುಹಿಸಿದ್ದೇವೆ, ಅದು ಬರುತ್ತಿದ್ದ ಹಾಗೆ ನಾನೆಲ್ಲ ಮಾಡಿಬಿಡುತ್ತೇನೆಂದು ಹೇಳಿದರು ಶ್ರೀರಾಮರೆಡ್ಡಿಯವರು 'ಹೀಗೆಲ್ಲ ಆಗಿದೆಯಲ್ಲಾ ನಗರಸಭೆಗಳಲ್ಲಿ ಮುಷ್ಕರ ಮಾಡುತ್ತಿದ್ದಾರೆ,' ಎಂದು ಹೇಳಿದಾಗ, ಆವತ್ತು ಈ ಮನೆಯಲ್ಲಿ ಈ ನಿಮ್ಮ ಉತ್ತರ ಬಂದಿದ್ದು ನಾವೆಲ್ಲ, 'ಎಲ್ಲ ಆಗಿಹೋಗಿದೆ, ಇದನ್ನೆಲ್ಲ ಮಂತ್ರಿಗಳು ಹೇಳಿಬಿಟ್ಟಿದ್ದಾರೆ ಎಂದು ನಾನು ಮುಷ್ಕರ ನಿರತರನ್ನು ಕರೆದು ಹೇಳಿದರೆ, ಇವರ ರೈಲು ಅಲ್ಲಿಯೇ ನಿಂತುಹೋಗಿದೆ ಅದು ಸರಿಯಾಗಿ ಮುಂದಕ್ಕೆ ಹೋಗಿಲ್ಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ . ರೈಲಿಗೆ diesel ಎಲ್ಲ ಮುಗಿದುಬಿಟ್ಟಿದೆ ಅದಕ್ಕಾಗಿ ಅದು ಅಲ್ಲಿಯೇ ನಿಂತುಬಿಟ್ಟಿದೆ

ಶ್ರೀ ಕೆ ಶ್ರೀನಿವಾಸಗೌಡ · ಈ ವಿಧಾನಸಭೆಯಲ್ಲಿ ಈ ತರಹ ಹೇಳಿಕೆ ಕೊಡವಂಥ ಅಗತ್ಯ ನಿಮಗೇನಿತ್ತು? ಆಗಲಿಲ್ಲವೆಂದರೆ ಇಂಥಿಂಥದ್ದು ಆಗಲಿಲ್ಲವೆಂದು ಹೇಳಬೇಕು ಎಲ್ಲ ಓದಿದಿರಿ ಅಲ್ಲಿಗೂ 'ಇದೆಲ್ಲ ಏಕ್ರೀ ಹೇಳಬೇಕೆಂದು' ಅಧ್ಯಕ್ಷರು ಹೇಳಿದರು ಇಲ್ಲ, ಹೇಳಬೇಕೆಂದು ಅದೂ ಕೂಡ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ ವಿಷಯಕ್ಕೆ ಉತ್ತರ ಕೊಟ್ಟರು ಇಡೀ ರಾಜ್ಯದ ಪಟ್ಟಣಗಳಲ್ಲಿ ಕುಡಿಯುವ ನೀರಿಗೆ ಕಷ್ಟವಾಗಿದೆ ಇವತ್ತು ನೀವು ದಿನಗೂಲಿ ನೌಕರರನ್ನಯ ಖಾಯಂ ಮಾಡುತ್ತಿರೋ, ಏನು ಮಾಡುತ್ತೀರೋ, ನೀರು ಕೊಡುವಂಥ ಕೆಲಸ ಅರ್ಜೆಂಟಾಗಿ ಮಾಡಿ, ದಿನಗೂಲಿ ನೌಕರರನ್ನೂ ಸಹ ಖಾಯಂ ಮಾಡುವಂಥ ಕೆಲಸ ದಯವಿಟ್ಟು ಮಾಡಿ, ಮತ್ತೆ ರೈಲು ಬಿಡದೇ ಮಾಡಿ ಎಂದು ಹೇಳಿದೆ

ಉಪಾಧ್ಯಕ್ಷರು : ರೈಲೇನು ಬಿಡುವುದಿಲ್ಲ ಎಲ್ಲಾ ರೆಡಿ ಮಾಡಿಕೊಂಡಿದ್ದಾರೆ, ಉತ್ತರ ಹೇಳಿ

ಶ್ರೀ ಆರ್ ಶ್ರೀನಿವಾಸ್ (ಪೌರಾಡಳಿತ ಸಚಿವರು) ಬಹುಶಃ ರೈಲು ಬಿಟ್ಟು ಬಿಟ್ಟು ರೂಢಿಯಾಗಿರುತಕ್ಕಂಥವರಿಗೆ ರೈಲು ಬಿಡುವುದು ಗೊತ್ತಿರುತ್ತದೆ ಬಹುಶಃ ಆ ಕಡೆ ಇರತಕ್ಕಂಥವರಿಗೆ ರೈಲು ಬಿಡುವುದು ಬಹಳ ಜಾಸ್ತಿಯಾಗಿದೆ ಆದರೆ, ನಾವು ರೈಲು ಬಿಡುವ ಜನವಲ್ಲ ನಾವು ರೈಲು ಬಿಡುವ ಮಾತಲ್ಲ

ಡಾ ಎಂ ಸಿ ಸುಧಾಕರ್ ನೀವು ರೈಲು ಬಿಡುವುದಿಲ್ಲ ರೀಲ್ ಬಿಡುತ್ತೀರಿ ಅಷ್ಟೆ

ಶ್ರೀ ಆರ್ ಶ್ರೀನಿವಾಸ್ ಇಷ್ಟು ವರ್ಷಗಳ ಕಾಲ ಇವರೆಲ್ಲ ನೀತಿ ಹೇಳತಕ್ಕಂಥ ಜನ ಯಾರು ಕೂಡ ಇವರನ್ನು ಖಾಯಂ ಮಾಡುವುದಾಗಲಿ, ಅಲ್ಲ ಇವರಿಗೆ ಸರಿಯಾದ ರೀತಿಯಲ್ಲಿ ಸಂಬಳ ಕೊಡುವುದಕ್ಕೆ ಕೂಡ ಸುಮಾರು 50 ವರ್ಷಗಳಾದರೂ ಆ ಕಾನೂನು ತಂದಿರಲಿಲ್ಲ ಮೊನ್ನೆ ತಾನೇ ಹೇಳಿದ ಹಾಗೆ, ಮಾನ್ಯ ಅಧ್ಯಕ್ಷರೆ, ನಿಮ್ಮ ಸ್ಥಾನದಲ್ಲಿ ಮಾನ್ಯ ರಮೇಶ್ ಕುಮಾರ್ ರವರು ಕುಳಿತ್ತಿದ್ದರು ನಾವು ಮೊಟ್ಟಮೊದಲಿಗೆ ಅವರಿಗೆ ಖಾಯಂ ಆಗಿ ಪ್ರತಿ ತಿಂಗಳು ಸಂಬಳ ಕೊಡುವ ಹಾಗೆ ಮಾಡಿರುವ ಕೀರ್ತಿ ನಮ್ಮ ಸರ್ಕಾರದ್ದು ಎಂದು ಹೇಳುವುದಕ್ಕೆ ಇಚ್ಚಿಸುತ್ತೇನೆ ಇದುವರೆವಿಗೂ ಯಾರೂ ಮಾಡಿಲ್ಲ

ಶ್ರೀ ಕೆ ಶ್ರೀನಿವಾಸಗೌಡ ಆಗ ಪಟೇಲ್‌ರ ಸರ್ಕಾರ ಇತ್ತು ಆಗ ನಾವು ಕೂಡ ಅಲ್ಲಿಯೇ ಇದ್ದೆವು

ಶ್ರೀ ಆರ್ ಶ್ರೀನಿವಾಸ್ . ಇಷ್ಟು ವರ್ಷ ನಿಮ್ಮ ಸರ್ಕಾರವೇ ಇತ್ತು ಆ ಅವಧಿಯಲ್ಲಿ ಒಬ್ಬರನ್ನು ನೀವು ಖಾಯಂ ಮಾಡುವುದಕ್ಕೆ ಆಗಲಿಲ್ಲ ಇಷ್ಟೆಲ್ಲಾ ಹೇಳತಕ್ಕಂಥ ಜನ, ಅವರೂ ಸತತವಾಗಿ ಈ ಬೇಡಿಕೆಗಳನ್ನಿಟ್ಟುಕೊಂಡು ಹೋರಾಟ ಮಾಡಿಕೊಂಡೇ ಬಂದಿದ್ದರು ಇಷ್ಟಾದರೂ ಅವರ ಬಗ್ಗೆ ಚಿಂತನೆ ಮಾಡುತ್ತಿರಲಿಲ್ಲ, ಅವರಿಗೆ ಯಾವ ವೇತನವೂ ಇಲ್ಲ ಆದರೆ ಇವತ್ತಿನ ದಿನ ಅವರ ಬೇಡಿಕೆ ಏನು ಇದೆ ಆ ಎಲ್ಲಾವನ್ನೂ ಕೂಡ ನಾವು ಪೂರ್ತಿಗೊಳಿಸಿದ್ದೇವೆ ದಿನಗೂಲಿ ನೌಕರರ ಬಗ್ಗೆ ಸಭೆ ಕರೆದಿಲ್ಲವೆಂದು ಹೇಳಿದರು ನಾನು ಹಾಗೂ ಸಂಬಂಧಪಟ್ಟ ಡೈರೆಕ್ಟರ್‌ರವರು, ಅಧಿಕಾರಿಗಳು 5ನೇ ತಾರೀಖಿನ ದಿವಸ ಒಂದು ಸಭೆಯನ್ನು ಕರೆದಿದ್ದೇವೆ ನಾನು 6ನೇ ತಾರೀಖಿನಂದು ಸಭೆ ಕರೆದಿದ್ದೇನೆ ಇಡೀ ರಾಜ್ಯಾದ್ಯಂತವಿರುವ ಎಲ್ಲಾ ಪದಾದಿಕಾರಿಗಳ ಜೊತೆಗೆ ಏನೇನು ಆಗಬೇಕೆನ್ನುವುದರ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಿದ್ದೇವೆ ಅವರಿಗೂ ಕೂಡ ಇವರಲ್ಲಿ ಕೆಲವು ನ್ಯೂನತೆಗಳಿವೆಂದು ಹೇಳಿದ್ದೇವೆ, ನನಗೆ ಸ್ವಲ್ಪ ಎರಡು ತಿಂಗಳು ಅವಕಾಶ ಕೊಡಿ ಎಂದು ಹೇಳಿದ್ದೇವೆ ಮುಷ್ಕರ ನಡೆಯುತ್ತಿರುವಾಗಲೂ ಕೂಡ 18 ನೇ ತಾರೀಖಿನ ದಿವಸವೂ ಅವರೂ ಕೂಡ ಇದರ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಿದ್ದೇನೆ ಅವರದ್ದು ಒಂದೇ ಒಂದು ಸಮಸ್ಯೆಯಿರುವುದು, ದಿನಗೂಲಿ ನೌಕರರನ್ನು ಖಾಯಂ ಮಾಡುವುದು ಇದೊಂದೇ ಪ್ರಶ್ನೆ ಉಳಿದವೆಲ್ಲವನ್ನು ಕೊಡುವ ವ್ಯವಸ್ಥೆಯಾಗಿದೆ ಇದು ಯಾವ ರೀತಿಯಲ್ಲಿ ಮಾಡಬೇಕೆಂದುಯೋಚಿಸಿದಾಗ ಇದರಲ್ಲಿ ಸ್ವಲ್ಪ ನ್ಯೂನತೆ ಇದೆ ಈಗ ದಿನಗೂಲಿ ನೌಕರರು ಎಂದು ಹೇಳಿದರೆ, ಸುಪ್ರೀಂ ಕೋರ್ಟ್ ಕೊಟ್ಟಿರುವ ವ್ಯವಸ್ಥೆಯಲ್ಲಿ ಹತ್ತು ವರ್ಷಗಳ ಕಾಲ ಸತತವಾಗಿ ಏನು ಸೇವೆಯನ್ನು ಸಲ್ಲಿಸಿರುತ್ತಾರೆ, ಅವರನ್ನು

ಖಾಯಂಗೊಳಿಸಬೇಕೆನ್ನುವ ರೀತಿಯಲ್ಲಿ ಈಗಾಗಲೇ ಅವರನ್ನು ಖಾಯಂಗೊಳಿಸಲಾಗಿದೆ ಮಿಕ್ಕವರನ್ನು ಖಾಯಂಗೊಳಿಸತಕ್ಕಂಥ ವ್ಯವಸ್ಥೆಗೆ, ಅವರೇನು ಬೇರೆಯವರನ್ನು ಖಾಯಂ ಮಾಡಬೇಡಿ ಎಂದು ಹೇಳಿಲ್ಲ ಅವರನ್ನು ಖಾಯಂ ಮಾಡಬೇಕಾದರೆ ಎಲ್ಲಾ ಅಂಶಗಳನ್ನು ಪರಿಶೀಲನೆ ತೆಗೆದುಕೊಂಡು, ಕ್ಯಾಬಿನೇಟ್ ಸಬ್ ಕಮಿಟಿನಲ್ಲಿ ಚರ್ಚಿಸುತ್ತೇವೆ 6000 ಜನ ನೌಕರರು ಇದ್ದಾರೆ ಇಷ್ಟು ಜನರನ್ನು ಒಂದೇ ಸಲ ಮಾಡುವುದಕ್ಕೆ ಒಂದು ಪದ್ದತಿ ಬೇಕಾಗುತ್ತದೆ ಹಣಕಾಸಿನ ವ್ಯವಸ್ಥೆಯನ್ನು ತೆಗೆದುಕೊಂಡು, ಸ್ಯಾಂಕ್ಷನ್ಡ್ ಪೋಸ್ಟ್ ಇದೆ, ನಾನು ಇಲ್ಲವೆಂದು ಹೇಳಲಿಲ್ಲ ಆದರೂ ಕೂಡ ಇದಕ್ಕೆ ವ್ಯವಸ್ಥಿತವಾಗಿ ಯಾವ ರೀತಿ ಮಾಡಬೇಕು, ಯಾವ ರೀತಿಯಾಗಿ ಯಾರ್ಯಾರನ್ನು ಆಯ್ಕೆ ಮಾಡಬೇಕು ಇದರಲ್ಲಿ ಇನ್ನೊಂದು ರೋಸ್ಟರ್ ಸಿಸ್ಟಂ ಇದೆ ಕೆಲವು ಸಂದರ್ಭಗಳಲ್ಲಿ ಈ ರೋಸ್ಟರ್ ಸಿಸ್ಟಂನ್ನು ಅಳವಡಿಸಿಕೊಳ್ಳಬೇಕಾಗುತ್ತದೆ ನೀವು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ ಬಹುತೇಕವಾಗಿ ಇದರಲ್ಲಿ ಎಲ್ಲಾ ನೌಕರರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ಇದ್ದರೂ ಕೆಲವು ಸಂದರ್ಭದಲ್ಲಿ ಬೇರೆ ಜನಾಂಗದವರನ್ನು ಕೂಡ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ ಈ ಎಲ್ಲಾ ನ್ಯೂನತೆಗಳಿಂದಾಗಿ ನಾನು ಅವರನ್ನು ಕೇಳಿಕೊಳ್ಳುತ್ತಿದ್ದೇನೆ ಎರಡು ತಿಂಗಳ ಕಾಲಾವಕಾಶ ಮಾಡಿಕೊಡಿ ಇದನ್ನು ಪರಿಗಣಿಸಿ ಖಂಡಿತವಾಗಿ ನಿಮ್ಮೆಲ್ಲರನ್ನೂ ಖಾಯಂ ಮಾಡುವ ವ್ಯವಸ್ಥೆಯನ್ನು ಮಾಡುತ್ತೇವೆಂದು, ನಾನು ಪದಾದಿಕಾರಿಗಳಿಗೆ ಹೇಳಿದ್ದೇನೆ ಅವರು ಯಾವುದೋ ಒಂದು ಉದ್ದೇಶವಿಟ್ಟುಕೊಂಡು, ಯಾವುದೋ ಹಿನ್ನೆಲೆಯಲ್ಲಿ ಅಥವಾ ಈ ಸರ್ಕಾರಕ್ಕೇನು ಒಳ್ಳೆಯ ಹೆಸರು ಬರುತ್ತಿದೆ, ಎಲ್ಲಿ ನೋಡಿದರೂ ಕೂಡ ಕೋಟಿಗಟ್ಟಲೆ ಹಣ ಕೊಟ್ಟುಬಿಟ್ಟಿದ್ದಾರೆ, ಎಲ್ಲಿಗೆ ಹೋದರೂ ಅಭಿವೃದ್ಧಿ ಕೆಲಸ ನಡೆಯುತ್ತಿದೆ, ಇದನ್ನೆಲ್ಲ ನೋಡಿ ಈ ವ್ಯವಸ್ಥೆಯನ್ನು ಮಾಡುತ್ತಿದ್ದಾರೆಯೇ ಹೊರತು ಬೇರೇನೂ ಇಲ್ಲ ನೀವು ಯಾವತ್ತಾದರೂ ನಿಮ್ಮ ಮುನಿಸಿಪಾಲಿಟಿಗಳಲ್ಲಿ ಇಷ್ಟೊಂದು ಹಣ ಬರುವುದನ್ನು ನೋಡಿದಿರಾ? 20 ರಿಂದ 50 ಲಕ್ಷ ರೂಪಾಯಿ ಬರುತ್ತಿತ್ತು ಈಗ 2–3 ಕೋಟಿ ಬರುತ್ತಿದೆ ಗೌರವಾನ್ವಿತ ಸದಸ್ಯರಾದ ಶ್ರೀನಿವಾಸ ಗೌಡರು ರೈಲು ಬಿಡುತ್ತಿದ್ದಾರೆಂದು ಹೇಳಿದರು ಆರು ಕೋಟಿ ಬಂದಿದೆ, ಯಾವಾತ್ತಾದರೂ ಆರು ಕೋಟಿ ರೂಪಾಯಿ ಬಂದಿರುವುದನ್ನು ಇವರು ನೋಡಿದ್ದಾರಾ? ರೈಲು ಬಿಡುವ ಜನ ಆರು ಕೋಟಿ ನೋಡಿದ್ದಾರಾ? ಈ ರೈಲು ಬಿಟ್ಟು ಆ ಜನರಿಗೆ ಅನ್ಯಾಯ ಮಾಡಿದವರು ಅವರು

ಶ್ರೀ ಕೆ.ಶ್ರೀನಿವಾಸ ಗೌಡ : ಈಗ ಇನ್ನೊಂದು ರೈಲು ಬಿಡುತ್ತಿದ್ದಾರೆಂದು ಹೇಳಬೇಕಾಗುತ್ತದೆ

(ಗೊಂದಲ)

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) . ಮಂತ್ರಿಗಳೇ ಇದು ಸಮರ್ಪಕವಾದ ಉತ್ತರವಲ್ಲ ಈಗಾಗಲೇ ನಮ್ಮ ಎಲ್ಲಾ ಹಿರಿಯ ಶಾಸಕರು ಹೇಳಿದ್ದಾರೆ ಎಲ್ಲಾ ರಾಜ್ಯದಲ್ಲಿ ಇವತ್ತಿನ ದಿವಸ ಸ್ವಚ್ಛತೆಯಾಗುತ್ತಿಲ್ಲ, ನೀರು ಸಿಗುತ್ತಿಲ್ಲ, ನಿಮ್ಮ port Folio ಅಂಧದ್ದು ಎರಡು ತಿಂಗಳಾದ ಮೇಲೆ ಎಂದು ಹೇಳುತ್ತೀರಿ ಆ ವಿಚಾರ ಬೇರೆ ನೀವೇನು ಮೊನ್ನೆ ಶುಕ್ರವಾರ ನಾನು ಎತ್ತಿದ ಪ್ರಶ್ನೆಗೆ ಉತ್ತರ ಹೇಳಿದಿರಿ, ಈಗ ಅದನ್ನೇ ರಿಪೀಟ್ ಮಾಡುತ್ತಿದ್ದೀರಿ ಈ ಮಧ್ಯೆದಲ್ಲಿ ಎರಡು ದಿನಗಳ ಕಾಲ ಏನು ಮಾಡಿದ್ದೀರಿ? ಮಾತುಕತೆ ಮಾಡಿದ್ದೀರಾ? ಮಾಡತಕ್ಕಂಧ ವ್ಯವಸ್ಥೆ ಮಾಡಿದ್ದೀರಾ? ಅರ್ಧದಷ್ಟನ್ನಾದರೂ ನೀವು ತೆಗೆದುಕೊಳ್ಳಬೇಕಲ್ಲವೇ? ಎಲ್ಲಿ ಕ್ಲಿಯರ್ ವೇಕೆನ್ಸಿ ಇದೆ you have to take decision ಇದಕ್ಕೇನು ಕ್ಯಾಬಿನೆಟ್ ಅಪ್ರೂವಲ್ ಬೇಕಾಗಿಲ್ಲ ನಾವು ಹಿಂದೆ ಮಾಡಿದ್ದೇವೆ ಇದಕ್ಕೆ ನೀವು top priority ಕೊಟ್ಟು war-footing ರೀತಿಯಲ್ಲಿ ಕೆಲಸ ಮಾಡುವ ರೀತಿಯಲ್ಲಿ you have to take decision ಸಂಪುಟದ ಸಭೆಯಾಯಿತು, ಅಲ್ಲಿ ನೀವು ಪ್ರಸ್ತಾಪಿಸಲಿಲ್ಲ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಲಿಲ್ಲ ಇದು ಮಹತ್ವದ ವಿಚಾರ, ಎಲ್ಲಾ ಕಡೆಗೆ ಪೌರ ಕಾರ್ಮಿಕರು ಕೆಲಸ ಮಾಡುತ್ತಿಲ್ಲ, ಹೀಗಾಗಿ ಸ್ವಚ್ಛತೆಯಾಗಿತ್ತಿಲ್ಲ, ಇವರು ಬಗ್ಗುವ ರೀತಿಯಲ್ಲಿ ಕಾಣುತ್ತಿಲ್ಲ, ಇವರಿಗೆ ನಾವು ರಿಯಾಯಿತಿ ಕೊಡಬೇಕೆಂದು ಹೇಳಿ ನೀವು ನಿರ್ಧಾರ ತೆಗೆದುಕೊಳ್ಳಬೇಕು ನೀವು ನಿನ್ನೆ ಏನು ಹೇಳಿದಿರಿ ಅದೇ ರೀತಿಯಾಗಿ ಇವತ್ತು ರಿಪೀಟ್ ಮಾಡುತ್ತಿದ್ದೀರಿ ಇದರಲ್ಲಿ ನಾವೇನು ರಾಜಕಾರಣ ಮಾಡತಕ್ಕಂಧದಿಲ್ಲ ನಾವು ಇದರಲ್ಲಿ ರಾಜಕೀಯ ಮಾಡುವುದಿಲ್ಲ ಇವತ್ತು ನಿಮ್ಮ ಶ್ರೀನಿವಾಸ ಗೌಡರವರೇನಾದರೂ ರಾಜಕೀಯ ಮಾಡಬಹುದು, ಅವರು ನಿಮ್ಮ ಜಿಲ್ಲೆಗೆ ಸಂಬಂಧಪಟ್ಟವರು, ನೀವು ಅವರನ್ನು ಕೇಳಿ ನಾವು ರಾಜ್ಯದ ಹಿತದೃಷ್ಟಿಯಿಂದ ನಮ್ಮ ಕೆಲಸವನ್ನು ನಾವು ಮಾಡುತ್ತಿದ್ದೇವೆ That is your duty ನಿಮಗೆ ಜವಾಬ್ದಾರಿ ಇದೆ, ಇದರಲ್ಲಿ ನೀವು ಆ ಕೆಲಸ ಮಾಡುತ್ತಿಲ್ಲವೆನ್ನುವ ಅಪಾದನೆ ಮಾಡಬೇಕಾಗುತ್ತದೆ, ಸರಿಯಾದ ರೀತಿಯಲ್ಲಿ ಉತ್ತರ ಕೊಡಿ ಇವತ್ತು ಸರ್ಕಾರ ಇದರ ಬಗ್ಗೆ ಎನಾದರೂ ಕ್ರಮ ತೆಗೆದುಕೊಂಡು, ಎಲ್ಲರೂ ತಮ್ಮ ತಮ್ಮ ಡ್ಯೂಟಿ ಮೇಲೆ ಹಾಜರಾಗುವಂತೆ ಆದೇಶ ಕೊಡಬೇಕು

ಶ್ರೀ ಆರ್ ಡಿ ಪಾಟೀಲ್ ತಾವೀಗ ಮುನಿಸಿಪಾಲಿಟಿಗೆ ಸಾಕಷ್ಟು ಹಣ ಬರುತ್ತದೆ, ಇದಕ್ಕೆ ನಮ್ಮ ಸರ್ಕಾರ ಕಾರಣ ಎನ್ನುವ ಮಾತನ್ನು ಹೇಳಿದಿರಿ ಹಿಂದೆ ಕಾಂಗ್ರೆಸ್ ಸರ್ಕಾರವಿದ್ದಾಗ Second State Finance Commission ಅನ್ನು ನೇಮಿಸಿತು ಅದರ ಶಿಫಾರಸ್ಸುಗಳನ್ನು ಧರ್ಮಸಿಂಗ್ ರವರ ಸರ್ಕಾರ ಒಪ್ಪಿ, ಸಿದ್ದರಾಮಯ್ಯ ನವರು ಹಣಕಾಸಿನ ಸಚಿವರಾಗಿದ್ದಾಗ ಅದನ್ನು ಚಾಲೂ ಮಾಡಿದರು ನಿಮ್ಮವರು ಅದನ್ನು ಮುಂದುವರಿಸಿಕೊಂಡು ಹೋಗುತ್ತಿದ್ದೀರಿ ಆ ಶಿಫಾರಸ್ಸು ಪ್ರಕಾರ ದುಡ್ಡು ಬರುತ್ತದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಮಂತ್ರಿಗಳು ಹೇಳಿದಂಥ ಒಂದಂಶವನ್ನು ನಾವು ಕೂಡ ಒಪ್ಪುತ್ತೇವೆ ದಿನಗೂಲಿ ನೌಕರರನ್ನು ಖಾಯಂ ಮಾಡಬೇಕಾದರೆ, ಕೆಲವು ಕಾನೂನಿನ ಸಮಸ್ಯೆಗಳಿವೆ ಇವುಗಳನ್ನು ಪರಿಹರಿಸಬೇಕಾಗುತ್ತದೆಂದು ಅವರೇನು ಹೇಳುತ್ತಿದ್ದಾರೆ, ಅದನ್ನು ಒಪ್ಪಬೇಕಾಗುತ್ತದೆ ಆದರೆ ಪ್ರಶ್ನೆ ಇರುವುದು ಏನೆಂದರೆ, ಅವರನ್ನು ಇವರು ಕರೆದು ಅದರ ಬಗ್ಗೆ ಮನದಟ್ಟು ಮಾಡಿಕೊಡಬೇಕಲ್ಲವೇ ? ಉಳಿದ ಬೇಡಿಕೆಗಳನ್ನು ಪರಿಹಾರ ಮಾಡುತ್ತೇವೆ, ಇದು ಒಂದಕ್ಕೆ ಕಾನೂನು ತೊಡಕು ಇದೆ, ಇದನ್ನು ಪರಿಹಾರ ಮಾಡಬೇಕಾದರೆ ಸ್ವಲ್ಪ ಕಾಲಾವಕಾಶಬೇಕೆಂದು ಮನವರಿಕೆ ಮಾಡಬೇಕಲ್ಲವೆ? ಖಾಯಂ ಮಾಡುವ ಸಂದರ್ಭದಲ್ಲಿ, ನಿಂತ ಕಡೆ ಖಾಯಂ ಮಾಡುವುದಕ್ಕೆ ಯಾವುದೇ ಸರ್ಕಾರಕ್ಕೆ ಆಗುವುದಿಲ್ಲ ನೀವು ಇದ್ದರೂ ಆಗುವುದಿಲ್ಲ ಯಾರು ಇದ್ದರೂ ಆಗುವುದಿಲ್ಲ ನಿಂತ ಕಡೆ ಇವರನ್ನು ಖಾಯಂ ಎಂದು ಆರ್ಡರ್ ಹೊರಡಿಸಲಿಕ್ಕೆ ಆಗುವುದಿಲ್ಲ ಅದನ್ನು ಎಲ್ಲರೂ ಒಪ್ಪುತ್ತಾರೆ ಆದರೆ, ಇಲ್ಲಿ ಪ್ರಶ್ನೆಯಿರುವುದು ನೀವು ಅವರನ್ನು ಕರೆದು ಮಾತುಕತೆಗೆ ಕೂಡಿಸಿ ಅವರ ಜೊತೆಯಲ್ಲಿ ಮಾತನಾಡಬೇಕಲ್ಲವೇ?

ಶ್ರೀ ವಾಟಾಳ್ ನಾಗರಾಜ್ ಈ ವಿಚಾರದಲ್ಲಿ ಮಾನ್ಯ ಹಣಕಾಸಿನ ಸಚಿವರು ಮೌನವಾಗಿರುವುದು ಬೇಡ ಇದು ಬಹಳ ದೊಡ್ಡ ಗಂಭೀರವಾದ ಪರಿಸ್ಥಿತಿ ಹಣಕಾಸಿನ ಸಚಿವರು ಇದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕೆಂದು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ

ಶ್ರೀ ಬಿ ಎಸ್ ಯಡಿಯೂರಪ್ಪ(ಉಪ ಮುಖ್ಯಮಂತ್ರಿಗಳು) . ಆಡಳಿತ ನಡೆಸಿದಂಥ ಸ್ನೇಹಿತರು ಈಗ ಅಲ್ಲಿ ಕುಳಿತಿದ್ದಾರೆ ಸದಸ್ಯರು ಮಾತನಾಡುವ ಕಾಲದಲ್ಲಿ ರಾಜಕೀಯ ಇಚ್ಛಾಶಕ್ತಿಯಿಲ್ಲವೆಂದು ಹೇಳಿದರು ಇದು ರಾಜಕೀಯ ಭಾಷೆ ನೀವು ಹೇಳಿ ಪರವಾಗಿಲ್ಲ ನಮಗೆ ರಾಜಕೀಯ ಇಷ್ಟಾಶಕ್ತಿಯಿದ್ದುದ್ದರಿಂದಲೇ ಅವರು ಕೊಟ್ಟಂಥ ಸುಮಾರು 14 ಬೇಡಿಕೆಗಳಲ್ಲಿ 8 ಬೇಡಿಕೆಗಳನ್ನು ಪೂರ್ತಿಗೊಳಿಸಿದ್ದೇವೆ ಎರಡನೆಯದು 15–20 ದಿವಸಗಳ ಈಚೆಗೆ ಡೈಲಿವೇಜಸ್ ನಲ್ಲಿದ್ದವರನ್ನು ಖಾಯಂ ಮಾಡುವುದಕ್ಕೆ ಆ ಚೌಕಟ್ಟಿನಲ್ಲಿದ್ದಂಥ ಸುಮಾರು 1226 ಜನರನ್ನು ಖಾಯಂಗೊಳೀಸಿ 15 ದಿವಸಗಳ ಹಿಂದೆ ಆರ್ಡರ್ ಇಶ್ಯೂ ಮಾಡಿದ್ದೇವೆ ಇನ್ನು 4051 ಜನ ಇದ್ದಾರೆ ಇಲ್ಲಿ ಸುಪ್ರೀಂಕೋರ್ಟಿನ ಪ್ರಶ್ನೆ ಬರುತ್ತದೆ ಗೌರವಾನ್ವಿತ ಸದಸ್ಯರು ಹೇಳಿದಂತೆ, ಆ ಚೌಕಟ್ಟಿನಲ್ಲಿ ಎಲ್ಲವನ್ನು ನಮ್ಮ ಕಣ್ಣುಮುಂದೆ ಇಟ್ಟುಕೊಂಡು, ರೋಸ್ಟರ್, ಮತ್ತೊಂದು, ಇದರ ಆಧಾರದ ಮೇಲೆ ಮಾಡಬೇಕಾಗುತ್ತದೆ ಇಲ್ಲಾಂದ್ರೆ ನೀವೇನೆ ನಾಳೆ ಯಾವ ಆಧಾರದ ಮೇಲೆ ಮಾಡಿದಿರಿ ಎಂದು ಕೇಳುತ್ತೀರಿ ಇಲ್ಲಿ ಒಬ್ಬರನ್ನೇ ಮಾಡುವ ಪ್ರಶ್ನೆಯಲ್ಲ ತಮಗೆ ಗೊತ್ತಿರುವ ಹಾಗೆ ನಾನು ಬಾಯಿ ಮುಚ್ಚಿಕೊಂಡು ಕುಳಿತಿಲ್ಲ ಸಂಬಂಧಪಟ್ಟ ಸಚಿವರು ಇದ್ದಾರೆ ಅವರು

ಮಾತನಾಡುತ್ತಾರೆಂದು ನಾನು ಕುಳಿತಿದ್ದೆ ನೀವೇ ಕುಳಿತಿರಬೇಕು, ಹೆಚ್ಚಿಗೆ ಮಾತನಾಡಬಾರದು ಎಂದು ಹೇಳಿದಿರಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಬೇರೆ ವಿಚಾರಕ್ಕೆ ನೀವು ಸ್ವಲ್ಪ ಸುಮ್ಮನಿರಿ ಎಂದು ಹೇಳಿದೆವು ಯಡಿಯೂರಪ್ಪನವರು ಮುಖ್ಯಮಂತ್ರಿಯಾಗುವವರೆಗೆ ಸುಮ್ಮನಿರಿ ಎಂದು ಹೇಳಿದೆವು

ಶ್ರೀ ವಾಟಾಳ್ ನಾಗರಾಜ್ . ಯಡಿಯೂರಪ್ಪನವರು ಮೌನಕ್ಕೆ ಶರಣರಾಗಿರುವುದು ನಮ್ಮಿಂದಲ್ಲ ನೀವು ಮಾತನಾಡಬೇಡಿ ಎಂದು ನಾವು ಯಾವತ್ತು ಹೇಳಿಲ್ಲ ನೀವು ಯಾವುದೋ ಉದ್ದೇಶಕ್ಕೆ ಮೌನವಾಗಿದಿರಿ, ಸಂತೋಷ, ನೀವು ಮೌನವಾಗಿರಿ ಎಂದು ಹೇಳಿದೆವು ಅದು ಬಿಟ್ಟರೆ ಬೇರೆ ಮಾತಿಲ್ಲ

ಶ್ರೀ ಬಿ ಎಸ್ ಯಡಿಯೂರಪ್ಪ (ಹಣಕಾಸು ಇಲಾಖೆ ಸಚಿವರು) : ಮಾನ್ಯ ಉಪಾಧ್ಯಕ್ಷರೆ, 5ನೇ ವೇತನ ಆಯೋಗದ ಶಿಫಾರಸ್ಸುಗಳು ಈ ಪೌರಕಾರ್ಮಿಕರಿಗೂ ಕೂಡ ಅನ್ವಯ ವಾಗುತ್ತದೆ ಸರ್ಕಾರ ಇದನ್ನು ಈಗಾಗಲೇ ಅಕ್ಸೆಪ್ಟ್ ಮಾಡಿಕೊಂಡಿದೆ ಮತ್ತೆ SFC ಗ್ರಾಂಟ್‌ನಲ್ಲಿ 25 ಕೋಟಿ ರೂಪಾಯಿಗಳನ್ನು ಸಹ ತೆಗೆದಿಟ್ಟಿದ್ದೇವೆ ಮತ್ತೆ ಮಾನ್ಯ ಹಿರಿಯ ಸದಸ್ಯರುಗಳಿಗೆ ಈ ಸಂದರ್ಭದಲ್ಲಿ ಭರವಸೆ ಕೊಡುವುದಕ್ಕೆ ಇಷ್ಟಪಡುವುದೇನೆಂದರೆ, ಪೌರಕಾರ್ಮಿಕರ ಮುಖಂಡರನ್ನು ಕರೆಸಿ ಸಂಬಂಧಪಟ್ಟ ಸಚಿವರ ಜೊತೆ ಮಾತನಾಡುತ್ತೇವೆ ಇವತ್ತಿನ ದಿವಸ ಕುಡಿಯುವ ನೀರಿನ ಸಮಸ್ಯೆ ಮತ್ತು ಸ್ವಚ್ಚತೆಯ ಸಮಸ್ಯೆ ಸಾರ್ವಜನಿಕರಲ್ಲಿ ಉಂಟಾಗಿದೆ ಅವರು ಸರ್ಕಾರದ ಗಮನಕ್ಕೆ ತರುವುದಕ್ಕೋಸ್ಕರ ಬಹಳ ವರ್ಷಗಳಿಂದ ನ್ಯಾಯುತವಾದ ಸತ್ಯಾಗ್ರಹವನ್ನು ಮಾಡಿಕೊಂಡು ಬರುತ್ತಿದ್ದಾರೆ ಇದು ಸರ್ವೆಸಾಮಾನ್ಯವಾಗಿರತಕ್ಕಂಥದ್ದಾಗಿದೆ ಇವತ್ತಿನ ದಿವಸ ಹಗಲು–ರಾತ್ರಿ ದುಡಿಯುತ್ತಿರುವ ಈ ನೌಕರರು ಕೇವಲ 4000 ಸಂಬಳವನ್ನು ತೆಗೆದುಕೊಳ್ಳುತ್ತಾರಷ್ಟೆ ಈಗ ಬಾಕಿ 4558 ಜನ ನೌಕರರು ಉಳಿದುಕೊಂಡಿದ್ದಾರೆ ಸುಪ್ರೀಂ ಕೋರ್ಟ್ ನೀಡಿರುವ ಆದೇಶ ಮತ್ತು ರೋಸ್ಟರ್ ಪದ್ಧತಿಯನ್ನು ನೋಡಿಕೊಂಡು ವಿವರವಾದಂಥ ಮಾಹಿತಿಗಳನ್ನು ಪಡೆಯುತ್ತಿದ್ದೇವೆ ಆದ್ದರಿಂದ ಈ ಮನೆಯ ಮೂಲಕ ಪೌರಕಾರ್ಮಿಕರಲ್ಲಿ ವಿನಂತಿ ಮಾಡುವುದೇನೆಂದರೆ, ಸಂಬಂಧಪಟ್ಟಂಥ ಸಚಿವರು ಅವರ ಜೊತೆ ಮಾತನಾಡುತ್ತಾರೆಂದು ಮತ್ತು ಕಾನೂನು ಚೌಕಟ್ಟಿನೊಳಗೆ ಅವರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ನಾವು ಬದ್ಧರಿದ್ದೇವೆ ಆದ್ದರಿಂದ, ನಾಗರೀಕರ ಹಿತದೃಷ್ಟಿಯಿಂದ ಪೌರಕಾರ್ಮಿಕರು ಸತ್ಯಾಗ್ರಹವನ್ನು ಕೈಬಿಟ್ಟು ಕೆಲಸಕ್ಕೆ ಹೋಗಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಅವರ ಜೊತೆ ಚರ್ಚೆಮಾಡುವಂಥ ಕಾಲದಲ್ಲಿ ಪ್ರತಿಪಕ್ಷದ ನಾಯಕರುಗಳನ್ನು ನಾನು ಕರೆಸುತ್ತೇನೆ ಮತ್ತೆ ಮಾನ್ಯ ಸಚಿವರೂ ಕೂಡ ಇರುತ್ತಾರೆ. ಆ ಸಂದರ್ಭದಲ್ಲಿ

ನೀವೂ ಕೂಡ ಸಲಹೆಗಳನ್ನು ಕೊಡಿ ಈ ಜನರ ಸಮಸ್ಯೆಗಳನ್ನು ಬಗೆಹರಿಸಿ ಅವರು ನೆಮ್ಮದಿಯಿಂದ ನಮ್ಮ ಉದ್ದೇಶವಾಗಿದೆ ಅನೇಕ ಜ್ವಲಂತ ಸಮಸ್ಯೆಗಳು ಅವತ್ತಿನ ದಿವಸ ಬಗೆಹರಿಸುವುದಕ್ಕೆ ಆಗಲಿಲ್ಲ ಆಗ ರಾಜಕೀಯ ಇಚ್ಛಾಶಕ್ತಿ ಇರಲಿಲ್ಲ ಈಗ ನಾವು ಒಂದೊಂದೇ ಬಗೆಹರಿಸಿಕೊಂಡು ಬಂದಿದ್ದೇವೆ ದಿನಗೂಲಿ ನೌಕರರ ಬಗ್ಗೆ ಕೂಡ ಪರಿಶೀಲನೆ ಮಾಡುತ್ತಿದ್ದೇವೆ ಮುಂದಿನ ದಿವಸಗಳಲ್ಲಿ ಇದರ ಬಗ್ಗೆ ಪರಿಶೀಲನೆ ಮಾಡಿ ಸುಪ್ರೀಂ ಕೋರ್ಟ್‌ನ ಆದೇಶ ಚೌಕಟ್ಟಿನೊಳಗೆ ನಿಮ್ಮನ್ನೆಲ್ಲಾ ಕರೆದು ಮಾತನಾಡುತ್ತೇವೆ ಇದರ ಬಗ್ಗೆ ನಾವು open mindನಲ್ಲಿದ್ದೇವೆ ಆದ್ದರಿಂದ, ದಯಮಾಡಿ ಪೌರಕಾರ್ಮಿಕರು ಸಹಕರಿಸಬೇಕೆಂದು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ

ಶ್ರೀ ಎನ್ ಧರ್ಮಸಿಂಗ್ 50 ವರ್ಷಗಳಿಂದ ಕಾಂಗ್ರೆಸ್ ಪಕ್ಷ ಏನು ಮಾಡಿತ್ತೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಿರುತ್ತಾರೆ, ಮತ್ತೆ ತಾವೂ ಕೂಡ ಇದನ್ನೆ ಹೇಳಿಕೊಂಡು ಬರುತ್ತಿದ್ದೀರಿ ನಮ್ಮ ಕಾಲದಲ್ಲಿ 5ನೇ ವೇತನ ಆಯೋಗವನ್ನು ರಚನೆ ಮಾಡಿ ಮಾನ್ಯ ಗೋಪಾಲರೆಡ್ಡಿಯವರನ್ನು ಇದಕ್ಕೆ ಅಧ್ಯಕ್ಷರನ್ನಾಗಿ ಮಾಡಲಾಗಿತ್ತು ಅವರು ವರದಿ ಕೂಡ ಕೊಟ್ಟಿದ್ದಾರೆ ವರದಿ ಕೊಟ್ಟ ಮೇಲೆ ಮೊನ್ನೆ ದಿವಸದ ಬಜೆಟ್‌ನಲ್ಲಿ 561 ಕೋಟಿ ರೂಪಾಯಿಗಳನ್ನು ಇಡಲಾಗಿದೆ ಎಂದು ತಾವು ಹೇಳಿದ್ದೀರಿ ನಾನು ಇದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುತ್ತಿಲ್ಲ ಅಂತಿಮವಾಗಿ ಎಲ್ಲೆಲ್ಲಿ ಹಣವನ್ನು ಒದಗಿಸಿದ್ದೀರಿ ಎಂಬುದು ಮತ್ತು ಇದಕ್ಕೆ ಯಾವ ರೀತಿಯಾಗಿ resource mobilization ಮಾಡಿದ್ದೀರಿ ಎನತಕ್ಕಂಥದು ಬಹಳ ಘಹನವಾದಂಥ ವಿಚಾರವಾಗಿದೆ ಇದರ ಬಗ್ಗೆ ಡಿಮಾಂಡ್ ಮೇಲೆ ಚರ್ಚೆಯಾಗುವಂಥ ಸಂದರ್ಭದಲ್ಲಿ ಮಾತನಾಡುತ್ತೇವೆ ಆದರೆ, ನಾವು ಈಗ ಕೇಳುವುದೇನೆಂದರೆ, ಪೌರ ಕಾರ್ಮಿಕರು ಎಷ್ಟು ದಿವಸದಿಂದ ಕೆಲಸ ಮಾಡುತ್ತಿದ್ದಾರೆ? ಈ ರಾಜ್ಯದ ಜನತೆಗೆ ಎಲ್ಲ ಗೊತ್ತಿದೆ ಎಷ್ಟು ದಿವಸಗಳಿಂದ ನಾವು ಸಮಾಧಾನವಾಗಿ ಇರುವುದಕ್ಕೆ ಸಾಧ್ಯ? ಈ ರೀತಿಯಾದಾಗ ನಾವು ಕೇಳಬಾರದೇ?

ಶ್ರೀ ಬಿ ಎಸ್ ಯಡಿಯೂರಪ್ಪ : ನೀವು ಇತ್ತಕಡೆ ಇದ್ದರೆ ಏನು ಮಾಡುತ್ತಿದ್ದೇರೆಂಬುದನ್ನು ಹೇಳಿ, ಅದನ್ನು ನಾವು ಮಾಡುವುದಕ್ಕೆ ಸಿದ್ದರಿದ್ದೇವೆ

ಶ್ರೀ ಎನ್ ಧರ್ಮಸಿಂಗ್ ನಾವು ಮಾಡಿದ್ದೇವೆ

ಶ್ರೀ ಬಿ ಎಸ್ ಯಡಿಯುರಪ್ಪ ತಾವು ಎಲ್ಲಿ ಮಾಡಿದ್ದೀರಿ?

ಶ್ರೀ ಎನ್ ಧರ್ಮಸಿಂಗ್ : ಈ ಪೌರಕಾರ್ಮಿಕರ ಬಗ್ಗೆ ಈಗಾಗಲೇ ಮಾಡಿದ್ದಂಥ ಸಾಲಪ್ಪನವರ ಸಮಿತಿ ಏನಾಗಿದೆ? ಆಗ ಮಾನ್ಯ ಬಸವಲಿಂಗಪ್ಪನವರು ಮಾಡಿದ್ದರು ಮತ್ತೆ ಮಾನ್ಯ ದೇವರಾಜು ಅರಸುರವರ ಕಾಲದಲ್ಲಿ ಮತ್ತು ಮಾನ್ಯ ಗುಂಡುರಾವ್‌ರವರ ಕಾಲದಲ್ಲಿಯೂ ಕೂಡ ಮಾಡಲಾಗಿತ್ತು ಎಷ್ಟು ದಿವಸದಿಂದ ಪೌರಕಾರ್ಮಿಕರು ಮುಷ್ಕರ ಮಾಡುತ್ತಿದ್ದಾರೆ

ಇವರಿಗೋಸ್ಕರ ಎಷ್ಟು ಹಣ ವೆಚ್ಚವಾಗುತ್ತದೆ? ನೀವು ಅವರಿಗೆ ಕೊಡತಕ್ಕಂಥ ಹಣ ಎಷ್ಟು? ನೀವು ಈ ಕೆಲಸ ಮಾಡಿದರೆ ನಿಮಗೆ ಒಳ್ಳೆಯ ಹೆಸರು ಬರುತ್ತದೆ ನಮಗೇನು ಬರುವುದಿಲ್ಲ ನಾವೆಲ್ಲಾ ಜನಪ್ರತಿನಿಧಿಗಳಾಗಿದ್ದೇವೆ ಇವತ್ತಿನ ದಿವಸ ನಮ್ಮಗಳ ಮತಕ್ಷೇತ್ರದಲ್ಲಿ ಬಹಳಷ್ಟು ಸಮಸ್ಯೆಗಳಾಗುತ್ತಿವೆ ಕುಡಿಯುವ ನೀರಿನ ಮತ್ತು ಸ್ವಚ್ಚತಾ ಸಮಸ್ಯೆಗಳ ಬಗ್ಗೆ ಈಗಾಗಲೇ ಮಾನ್ಯ ಡಿ ಆರ್ ಪಾಟೀಲ್‌ರವರು ಹೇಳಿದ್ದಾರೆ ಇವತ್ತಿನ ದಿವಸ ಪೌರಕಾರ್ಮಿಕರು ಮಾಡುತ್ತಿರುವ ಮುಷ್ಕರ ಬಹಳ ಮಹತ್ವವಾದದು ಇವರ ಬಗ್ಗೆ ಸಂಪುಟದಲ್ಲಿ ಸರ್ಕಾರ ಏನು ಚರ್ಚೆಮಾಡಿದೆ ಎನ್ನತಕ್ಕಂಥದು ನಮಗೆ ಗೊತ್ತಾಗಿದೆ ಆದ್ದರಿಂದ, ಪೌರಕಾರ್ಮಿಕರ ಇಲಾಖೆಯ ಖಾತೆಯನ್ನು ಹೊಂದಿರುವ ಮಾನ್ಯ ಶ್ರೀನಿವಾಸ್ ರವರ ನೆರವಿಗೆ ತಾವು ಬರಬೇಕು ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳುವುದಕ್ಕೆ 2 ತಿಂಗಳು ಬೇಕಾಗಿಲ್ಲ ಇದರ ಬಗ್ಗೆ ಸರ್ಕಾರ ನಿಖರವಾದಂಥ ಒಂದು ಉತ್ತರವನ್ನು ಕೊಡಬೇಕು ತಾವು ಉಪಮುಖ್ಯ ಮಂತ್ರಿ ಹಾಗೂ ಹಣಕಾಸಿನ ಸಚಿವರಾಗಿದ್ದೀರಿ ಆದ್ದರಿಂದ, ಇವರ ಬಗ್ಗೆ ಏನು ಮಾಡಲಾಗುತ್ತದೆಂದು ಸ್ಪಷ್ಟವಾದ ಉತ್ತರವನ್ನು ತಾವು ಈ ಸದನಕ್ಕೆ ಮತ್ತು ರಾಜ್ಯದ ಜನತೆಗೆ ಕೊಡಬೇಕು

ಶ್ರೀ ಜಿ ವಿ ಶ್ರೀರಾಮರೆಡ್ಡಿ ಇದರ ಬಗ್ಗೆ ತೀರ್ಮಾನ ಮಾಡಲು ಕ್ಯಾಬಿನೆಟ್ ಸಬ್ ಕಮಿಟಿಯನ್ನು ಮಾಡಿದ್ದೀರಿ ಇದಕ್ಕೆ ಕ್ಯಾಬಿನೆಟ್ ದರ್ಜೆ ಸಚಿವರನ್ನು ಅಧ್ಯಕ್ಷರನ್ನಾಗಿ ಕೂಡ ಮಾಡಿದ್ದೀರಿ ಈ ಕ್ಯಾಬಿನೆಟ್ ಸಬ್ ಕಮಿಟಿ ಸಭೆ ಸೇರಿತ್ತೆ? ಮತ್ತೆ ಇದರ ಬಗ್ಗೆ ಚರ್ಚೆ ನಡೆಸಿ ಕ್ಯಾಬಿನೆಟ್ ಸಬ್ ಕಮಿಟಿ ವರದಿಯನ್ನು ಕೊಟ್ಟಿದೆಯೇ? ಏಕೆಂದರೆ ಪತ್ರಿಕೆಯಲ್ಲಿ ಒಂದು ಸುದ್ದಿಯನ್ನು ಓದಿದೆ ಅದೇನೆಂದರೆ, ಕ್ಯಾಬಿನೆಟ್ ಕಮಿಟಿಯ ಅಧ್ಯಕ್ಷರಾಗಿರತಕ್ಕಂಥ ಮಾನ್ಯ ರೇವಣ್ಣನವರನ್ನು ಅವರ ನೌಕರರ ಪ್ರತಿನಿಧಿಗಳು ಭೇಟಿ ಮಾಡಿ ಕೇಳಿದಂಥ ಸಂದರ್ಭದಲ್ಲಿ, ನನಗೂ ಆ ಸಮಸ್ಯೆಗೂ ಸಂಬಂಧವಿಲ್ಲ, ಮತ್ತೆ ಆ ಕಮಿಟಿ ಸಭೆ ಸೇರಿಲ್ಲವೆಂದು ಹೇಳಿದ್ದಾರೆ ಈ ವಿಷಯ ಪತ್ರಿಕೆಯಲ್ಲಿ ವರದಿ ಕೂಡ ಆಗಿದೆ ಇದು ನಿಜವೋ ಅಥವಾ ಸುಳ್ಳೋ ಎನ್ನತಕ್ಕಂಥದು ನನಗೆ ಗೊತ್ತಿಲ್ಲ ಕ್ಯಾಬಿನೆಟ್ ಸಬ್ ಕಮಿಟಿಯನ್ನು ರಚನೆ ಮಾಡಿ ಅವರು ವರದಿ ಕೊಟ್ಟಿದ್ದಾರೆಯೋ ಅಥವಾ ಇಲ್ಲವೋ ಎನ್ನತಕ್ಕಂಥದನ್ನು ತಾವು ಇದುವರೆಗೆ ಹೇಳಲಿಲ್ಲ ಒಂದು ವೇಳೆ ಕ್ಯಾಬಿನೆಟ್ ಸಬ್ ಕಮಿಟಿಯವರು ವರದಿ ಕೊಡದಿದ್ದರೆ ಅದಕ್ಕೆ ನೀವೇ ಜವಾಬ್ದಾರಿಯಾಗುತ್ತೀರಿ ತಕ್ಷಣ ಸಮಸ್ಯೆ ಪರಿಹಾರವಾಗುವುದಕ್ಕೆ ನಾನು ಈಗ ತಮಗೆ ಹೇಳುವುದೇನೆಂದರೆ, ಕ್ಯಾಬಿನೆಟ್ ಸಬ್ ಕಮಿಟಿಯ ವರದಿಯನ್ನು ತರಿಸಿಕೊಳ್ಳತ್ತೀರೋ ಅಥವಾ ಆ ಕಮಿಟಿಯನ್ನು ರಿವೈಸ್ ಮಾಡಿ ಮತ್ತೆ ಹೊಸ ಕಮಿಟಿಯನ್ನು ಮಾಡತಕ್ಕಂಥದು ನಿಮಗೆ ಬಿಟ್ಟಂಥ ವಿಚಾರ ಆದರೆ, ತಕ್ಷಣಕ್ಕೆ ಸಮಸ್ಯೆ ಪರಿಹಾರವಾಗಬೇಕಾದರೆ, ತಾವು ಈ ಸದನಕ್ಕೆ ಒಂದು ಆಶ್ವಾಸನೆಯನ್ನು

ಕೊಡಬೇಕಾಗುತ್ತದೆ, ಅದೇನೆಂದರೆ, ಈಗ ಇರತಕ್ಕಂಥ ಸಮಸ್ಯೆಗಳನ್ನು ಮತ್ತು ಕಾನೂನು ತೊಡಕುಗಳನ್ನು ಪರಿಹಾರ ಮಾಡಿಕೊಂಡು ನಾವು ಇಷ್ಟು ದಿವಸದಲ್ಲಿ ನಿಮ್ಮೆಲ್ಲರನ್ನೂ ಖಾಯಂ ಮಾಡುತ್ತೇವೆಂಬ ಒಂದು ಸ್ಪಷ್ಟವಾದಂಥ ಭರವಸೆಯನ್ನು ಅವರಿಗೆ ಈ ಸದನದ ಮುಖಾಂತರ ಕೊಡಬೇಕು ಅದನ್ನು ಬಿಟ್ಟು ನಾವು ಪರಿಶೀಲನೆ ಮಾಡುತ್ತೇವೆ, ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರೆ ಅವರು ಒಪ್ಪುವುದಿಲ್ಲ ಕಾನೂನು ತೊಡಕುಗಳು ಈ ರೀತಿಯಾಗಿವೆ, ಅವುಗಳನ್ನು ಪರಿಹಾರ ಮಾಡುವುದಕ್ಕೆ ಇಷ್ಟು ದಿವಸ ಸಮಯ ಬೇಕಾಗುತ್ತದೆ ಮತ್ತೆ ಇಷ್ಟು ದಿವಸದೊಳಗೆ ಗ್ಯಾರಂಟಿಯಾಗಿ ನಿಮ್ಮನ್ನೆಲ್ಲಾ ಖಾಯಂ ಮಾಡುತ್ತೇವೆಂಬ ಆಶ್ವಾಸನೆಯನ್ನು ಕೊಡಿ ಕೇವಲ ಬರೀ ಮಾತಿನಲ್ಲಿ ಹೇಳಿದರೆ ಆಗುವುದಿಲ್ಲ

ಶ್ರೀ ಎಸ್ ರಾಜೇಂದ್ರನ್ . ಮಾನ್ಯ ಉಪಾಧ್ಯಕ್ಷರೆ, ಬೋಗಸ್ ನೇಮಕಾತಿ ಆಗುತ್ತದೆಂದು ಸರ್ಕಾರ ಇದರ ಬಗ್ಗೆ ಯೋಚನೆ ಮಾಡುತ್ತಿದೆ ಎಂದು ನಮಗೆಲ್ಲರಿಗೂ ಸಹ ಗೊತ್ತಿದೆ ಅಧ್ಯಕ್ಷರ ಮುಖಾಂತರ 10 ಜನ ಉಪಾಧ್ಯಕ್ಷರ ಮುಖಾಂತರ 20 ಬೋಗಸ್ ನೇಮಕಾತಿಯಾಗಬಹುದು ಮತ್ತೆ ಕಾನೂನು ಬಿಟ್ಟು ನೇಮಕಾತಿಯಾಗುತ್ತದೆಂದು ಇದನ್ನು ಮಾಡುವುದಕ್ಕೆ ನಿಮಗೆ ಕಷ್ಟವಾಗಿದೆ ಆದ್ದರಿಂದ, ನೀವು ಅವರ ಮುಖಂಡರನ್ನು ಕರೆದು ನಾವು ಈ ರೀತಿಯಾದ ಕಾನೂನಿನಡಿಯಲ್ಲಿ ನೇಮಕಾತಿ ಮಾಡುತ್ತೇವೆ, ನಿಮ್ಮ ಬೋಗಸ್ ನೇಮಕಾತಿಗಳನ್ನು ನಾವು ಒಪ್ಪಿಕೊಳ್ಳುವುದಿಲ್ಲವೆಂದು ನೇರವಾಗಿ ಹೇಳಿ ಇಲ್ಲದಿದ್ದರೆ, 10 ಜನ ಇದ್ದರೆ ಅವರು 30 ಜನರಿದ್ದೇವೆಂದು ಹೇಳುತ್ತಾರೆ ಅಧ್ಯಕ್ಷರ ಕಡೆಯಿಂದ 20, ಉಪಾಧ್ಯಕ್ಷರ ಕಡೆಯಿಂದ 25 ಜನರಿಗೆ ಶಿಫಾರಸ್ಸು ಬಂದರೆ ಹೇಗೆ ಮಾಡುವುದಕ್ಕೆ ಬರುತ್ತದೆ? ಈ ರೀತಿಯಾಗಿ ಮಾಡುವುದಕ್ಕೆ ಬರುವುದಿಲ್ಲ ಕಾನೂನು ಪ್ರಕಾರ ಈ ರೀತಿಯಾಗಿ ಮಾಡುತ್ತೇವೆಂದು ಮತ್ತೆ ತಾವು ಈ ರೀತಿಯಾಗಿ ಹೋದರೆ ನಾವು ಒಪ್ಪಿಕೊಳ್ಳುವುದಿಲ್ಲವೆಂದು ನೇರವಾಗಿ ಹೇಳಿ

ಶ್ರೀ ಹೆಚ್ ಆಂಜನೇಯ ಮಾನ್ಯ ಉಪಾಧ್ಯಕ್ಷರೆ, ಪೌರಕಾರ್ಮಿಕರನ್ನು ಖಾಯಂ ಮಾಡಿಕೊಳ್ಳುವ ಕೆಲಸ ಆಗಬೇಕು 25 ವರ್ಷಗಳಿಂದ ಪೌರಕಾರ್ಮಿಕರ ಹುದ್ದಗೆ ನೇಮಕಾತಿ ಮಾಡಿಕೊಂಡಿಲ್ಲ ಆದ್ದರಿಂದ, ಈಗ ಎಷ್ಟು ಹುದ್ದೆಗಳು ಖಾಲಿ ಇವೆಯೋ ಅಷ್ಟು ಹುದ್ದೆಗಳನ್ನು ತುಂಬತಕ್ಕಂಥ ಕೆಲಸ ಆಗಬೇಕು

ಶ್ರೀ ಬಿ ಎಸ್ ಯಡಿಯೂರಪ್ಪ ಮಾನ್ಯ ಉಪಾಧ್ಯಕ್ಷರೆ, ಇಲ್ಲಿ 2–3 ಪ್ರಶ್ನೆಗಳಿವೆ ಸುಮಾರು 16 ರಿಂದ 17 ಸಾವಿರ ದಿನಗೂಲಿ ಮೇಲೆ ಕೆಲಸ ಮಾಡುತ್ತಿರುವ ನೌಕರರಿಗೆ ಸಂಬಂಧಪಟ್ಟಂಥ ವಿಷಯವಾಗಿದೆ ಸುಪ್ರೀಂ ಕೋರ್ಟ್‌ನ ತೀರ್ಮಾನದ ಪ್ರಕಾರ ನಾವು ರೆಗ್ಯುಲರೈಸ್ ಮಾಡಬೇಕಾಗುತ್ತದೆ

ಸುಪ್ರೀಂ ಕೋರ್ಟ್ ತೀರ್ಮಾನದ ಮಾಡುವ ಸಂದರ್ಭದಲ್ಲಿ ಕೆಲವು ನಿಬಂಧನೆಗಳನ್ನು ಹಾಕಿದೆ ಅದ್ಯಾವುದೆಂದರೆ, ರೋಸ್ಟರ್‌ನ್ನು ನೋಡಬೇಕು As on the date of appointment ನಿಂದ vacancy ಡಿಟೇಲ್ಸ್ ಇರಬೇಕೆಂದು ಹೇಳಿರುವಂಥ ವಿಚಾರಗಳು ಮುಖ್ಯಮಂತ್ರಿಯಾಗಿದಂಥ ಸನ್ಮಾನ್ಯ ಧರ್ಮಸಿಂಗ್‌ರವರಿಗೆ ಇದೆಲ್ಲಾ ಗೊತ್ತಿದೆ ಇಲ್ಲಿ ಕೇವಲ ಪೌರಕಾರ್ಮಿಕರೊಬ್ಬರು ಇಲ್ಲ, ಎಲ್ಲಾ ವರ್ಗದ ನೌಕರರು ಇದ್ದಾರೆ ಬಾಕಿ ಉಳಿದಿರತಕ್ಕಂಥ 4051 ಜನ ಪೌರಕಾರ್ಮಿರನ್ನು 24 ಗಂಟೆಯೊಳಗೆ ಖಾಯಂ ಮಾಡುವುದಕ್ಕೆ ನಾವು ಸಿದ್ದರಿದ್ದೇವೆ ಆದರೆ, ಈ ಸಮಸ್ಯೆ ಸುಮಾರು 16 ರಿಂದ 17 ಸಾವಿರ ಜನರಿಗೆ ಸಂಬಂಧಪಟ್ಟಿರತಕ್ಕಂಥದು ಕ್ಯಾಬಿನೆಟ್ ಸಬ್ ಕಮಿಟಿ ಮಾಡಿರತಕ್ಕಂಥದು ನಿಜ ಸದರಿ ಕಮಿಟಿ ಸಭೆ ಸೇರಿ ಅದನ್ನು ಬಗೆಹರಿಸುವಂಥ ಪ್ರಯತ್ನವನ್ನು ಮಾಡುತ್ತೇವೆಂದು ಈ ಮನೆಯಲ್ಲಿ ನಾನು ಭರವಸೆ ಕೊಟ್ಟಿದೆ ಹಣಕಾಸಿನ ಪ್ರಶ್ನೆಯಿಂದ ಇದಾಗಿಲ್ಲ ಸುಪ್ರೀಂ ಕೋರ್ಟ್‌ನ ಆದೇಶದ ಚೌಕಟ್ಟಿನಲ್ಲಿ ನಾವು ಮಾಡಬೇಕಾಗುತ್ತದೆ ಆದ್ದರಿಂದ, ನಾನು ಮತ್ತೊಮ್ಮೆ ಗೌರವಾನ್ವಿತ ಸದಸ್ಯರುಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಆದಷ್ಟು ಬೇಗ ಕ್ಯಾಬಿನೆಟ್ ಸಬ್ ಕಮಿಟಿ ಸಭೆ ಸೇರಿ ಇದರ ಬಗ್ಗೆ ವಿವರವಾಗಿ ಚರ್ಚೆ ಮಾಡಿ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಬಿಚ್ಚು ಮನಸ್ಸಿನಿಂದ ಇದ್ದೇವೆ ಆ ಕಡೆಗೆ ನಾವು ಗಮನವನ್ನು ಕೊಡುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ

ಶ್ರೀ ಬಿ ಆರ್ ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಮಳೆ ಬಂದು ಎಲ್ಲಾ ಕಡೆ ನೀರು ನಿಂತಿದೆ ಕಾಲರ ಅಥವಾ ಮತ್ತೊಂದು ರೋಗ ಹರಡಬಹುದು ಆದ್ದರಿಂದ, ತಕ್ಷಣ ಪರ್ಯಾಯ ಕ್ರಮದ ಕಡೆಗೆ ಸರ್ಕಾರ ಯೋಚನೆ ಮಾಡಬೇಕು ಇಲ್ಲದಿದ್ದರೆ ಇದನ್ನು ನಿಯಂತ್ರಣ ಮಾಡುವುದಕ್ಕೆ ಆಗುವುದಿಲ್ಲ ಇದರಿಂದ ಬಹಳ ದೊಡ್ಡ ಅನಾಹುತವಾಗುತ್ತದೆ ಮಹಾರಾಷ್ಟ್ರ ಗಡಿಯಲ್ಲಿ ಈಗಾಗಲೇ ಕಾಲರ ಬಂದಿದೆ ಇದೇನಾದರೂ ಹೆಚ್ಚು ಪರಿಣಾಮವಾದರೆ ನಮ್ಮ ಕಡೆ ಯಾರು ಉಳಿಯುವುದಿಲ್ಲ ಆದ್ದರಿಂದ, ಇದಕ್ಕೆ ಪರ್ಯಾಯ ವ್ಯವಸ್ಥೆಯನ್ನು ಸರ್ಕಾರ ತಕ್ಷಣ ಮಾಡಬೇಕೆಂದು ಕೇಳುತ್ತಿದ್ದೇನೆ

ಉಪಾಧ್ಯಕ್ಷರು ಮಾನ್ಯ ಹೆಚ್ ಎನ್ ಮಹದೇವ ಪ್ರಸಾದ್ ರವರು ಒಂದು ಹೇಳಿಕೆಯನ್ನು ನೀಡುತ್ತಾರೆ

3 ಹೇಳಿಕೆ

ವಿಷಯ ಡಾ ಬಂಜಗೆರೆ ಜಯಪ್ರಕಾಶ್‌ರವರು ರಚಿಸಿರುವ **"ಅನುದೇವಾ ಹೊರಗಣವನು"** ಎಂಬ ಕೃತಿಯನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಂಡಿರುವ ಬಗ್ಗೆ

ಶ್ರೀ ಹೆಚ್ ಎನ್ ಮಹದೇವಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ ಸಚಿವರು) ಮಾನ್ಯ ಉಪಾಧ್ಯಕ್ಷರೆ,